# ಹಂಪಿ ಟೈಮ್ಸ್


ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 111 Issue: 111 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 29.10.2024 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2











## ಆನಂದ ಬಾಣ








# ರೈಲ್ವೆ ಮೇಲ್ಸೇತುವೆ ನಿರ್ಮಾಣಕ್ಕೆ ಎಎಸ್‌ಐ ಆಕ್ಷೇಪ ಅಭಿವೃದ್ಧಿಗೆ ಹಿನ್ನಡೆ, ಅನುಮೋದನೆಗಾಗಿ ದೆಹಲಿ ಚಲೋ

### ಶಾಸಕ ಎಚ್.ಆರ್.ಗವಿಯಪ್ಪ ಹೇಳಿಕೆ | ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ | ಕಾಲಮಿತಿಯಲ್ಲಿ ಕಾಮಗಾರಿಗಳ ಪೂರ್ಣಗೊಳಿಸಲು ಸೂಚನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಕ್ಷೇತ್ರದಲ್ಲಿ ವಿಳಂಬವಾಗುತ್ತಿರುವ ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು ಎಂದು ಶಾಸಕ ಹೆಚ್.ಆರ್.ಗವಿಯಪ್ಪ ಭರವಸೆ ನೀಡಿದರು.

ನಗರದಲ್ಲಿ ಸೋಮವಾರ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ತಾಲೂಕಿನಲ್ಲಿ ಕೆಲವು ಕಾಮಗಾರಿಗಳು ಮಂದಗತಿಯಲ್ಲಿ ಸಾಗುತ್ತಿವೆ, ಅವುಗಳ ಪೈಕಿ ಅನಂತಶಯನಗುಡಿಯ ಸೇತುವೆ ಕಾಮಗಾರಿಯು ಒಂದು. ಈಗಾಗಲೇ ಸೇತುವೆ ಒಂದು ಭಾಗದಲ್ಲಿ ಕಾಮಗಾರಿ ಮುಂದುವರೆದಿದ್ದು, ಪುರಾತತ್ವ ಇಲಾಖೆಯವರು ಆಕ್ಷೇಪಣೆ ವ್ಯಕ್ತ ಪಡಿಸಿದ್ದರಿಂದ ಹಂಪಿ ಭಾಗದ ಕೆಲಸ ಆರಂಭವಾಗಿಲ್ಲ. ರೈಲ್ವೆ ಇಂಜಿನಿಯರ್‌ಗಳು ಹಾಗೂ ಗುತ್ತಿಗೆದಾರರೊಂದಿಗೆ ದೆಹಲಿಗೆ ತೆರಳಿ ಪುರಾತತ್ವ ಇಲಾಖೆಯಿಂದ ಅನುಮೋದನೆ ಪಡೆದುಕೊಂಡು ಬರುವುದಾಗಿ ತಿಳಿಸಿದರು.

ಸೇತುವೆ ಕಾಮಗಾರಿ ಪೂರ್ಣಗೊಂಡರೆ ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡಿದಂತಾಗುತ್ತದೆ. ಪ್ರವಾಸೋದ್ಯಮದಿಂದ ಕ್ಷೇತ್ರದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಹೇಳಿದರು.



**ಭೂಮಿ ಪೂಜೆ ನಡೆದ ಕಾಮಗಾರಿಗಳು:** ಅನಂತಶಯನಗುಡಿಯ ಸೇತುವೆ ಕೆಳಗೆ ವಂತಿಕೆ ಅನುದಾನದ ಅಡಿ 1.45 ಕೋಟಿ ವೆಚ್ಚದಲ್ಲಿ ಒಳಚರಂಡಿ ಹಾಗೂ ನೀರಿನ ಪೈಪ್‌ಲೈನ್ ಕಾಮಗಾರಿ ಮತ್ತು ಎನ್.ಹೆಚ್ ರಸ್ತೆ ಹತ್ತಿರವಿರುವ ನೀರು ಶುದ್ದೀಕರಣ ಘಟಕದಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ (ಡಿ.ಎಂ.ಎಫ್) ಅನುದಾನದ ಅಡಿ 6.30 ಕೋಟಿ ವೆಚ್ಚದಲ್ಲಿ ಶುದ್ದೀಕರಣ ಘಟಕಕ್ಕೆ ಕಚ್ಚಾ ನೀರು ಪೂರೈಸಲು ಪೈಪ್‌ಲೈನ್ ಅಳವಡಿಕೆ ಹಾಗೂ ವಿವಿಧ ಕಾಮಗಾರಿಗಳು ಮತ್ತು 2.60 ಕೋಟಿ ವೆಚ್ಚದಲ್ಲಿ ಶುದ್ದೀಕರಿಸಿದ ನೀರು ಶೇಖರಿಸಲು 20 ಲಕ್ಷ ಲೀಟರ್ ಸಾಮರ್ಥ್ಯದ ನೆಲಹಾಸು ಟ್ಯಾಂಕ್ ನಿರ್ಮಾಣ ಹಾಗೂ ವಿವಿಧ ಕಾಮಗಾರಿಗಳಿಗೆ ಶಾಸಕರು ಭೂಮಿ ಪೂಜೆ ನೆರವೇರಿಸಿದರು.

ಸ್ಥಳ ಪರಿಶೀಲನೆ: ಶಾಸಕರು ಇದೇ ವೇಳೆ ಶುದ್ದೀಕರಣ ಘಟಕದಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಪರಿಶೀಲಿಸಿ ಅಧಿಕಾರಿಗಳೊಂದಿಗೆ ಸಮಾಲೋಚಿಸಿದರು. ಹೊಸಪೇಟೆ ನಗರಕ್ಕೆ ಬೇಕಾಗುವಷ್ಟು ನೀರು ಪೂರೈಕೆಯಾಗುತ್ತಿರುವುದರ ಬಗ್ಗೆ ಮಾಹಿತಿ ಪಡೆದು, ಕಾಮಗಾರಿಗಳ ತುರ್ತು ಆರಂಭಕ್ಕೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರಸಭೆ ಅಧ್ಯಕ್ಷ ರೂಪೇಶ್ ಕುಮಾರ್, ನಗರಸಭೆ ಪೌರಾಯುಕ್ತ ಚಂದ್ರಪ್ಪ ಹಾಗೂ ನಗರಸಭೆಯ ಸದಸ್ಯರುಗಳು ಹಾಗೂ ಅಧಿಕಾರಿಗಳು ಭೂಮಿ ಪೂಜೆಯಲ್ಲಿ ಭಾಗಿಯಾಗಿದ್ದರು.

# ಒಳಮೀಸಲಾತಿ ಜಾರಿಗೆ ಆಗ್ರಹ

### ಮಾದಿಗ ಮತ್ತು ಛಲವಾದಿ ಸಮಾಜಗಳ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ



■ **ಹಂಪಿ ಟೈಮ್ಸ್ ಹರಪನಹಳ್ಳಿ**

ಸುಪ್ರೀ ಕೋರ್ಟ್ ಸಂವಿಧಾನ ಪೀಠದ ಆದೇಶದಂತೆ ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ವರ್ಗೀಕರಣ ಮಾಡಿ ಜಾರಿ ಮಾಡಬೇಕು ಎಂದು ಆಗ್ರಹಿಸಿ ಮಾದಿಗ ಮತ್ತು ಛಲವಾದಿ ಸಮಾಜಗಳ ಸಂಘಟನೆಗಳ ಒಕ್ಕೂಟ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಬಿ.ವಿ.ಗೀರಿಶ್ ಬಾಬು ಅವರ ಮೂಲಕ ಸಿಎಂ ಸಿದ್ದರಾಮಯ್ಯಗೆ ಮನವಿ ಸಲ್ಲಿಸಲಾಯಿತು.

ನಿವೃತ್ತ ಪ್ರಾಂಶುಪಾಲ ಟಿ.ರಾಜಪ್ಪ ಮಾತನಾಡಿ, ನಮ್ಮ ಹಕ್ಕುಗಳನ್ನು ನಾವು ರಕ್ಷಿಸಿಕೊಳ್ಳುವ ಸಲುವಾಗಿ ಈ ಹೋರಾಟವನ್ನು ಮಾಡುತ್ತಿದ್ದೇವೆ. ಒಳಮೀಸಲಾತಿ ನಮ್ಮ ಸಂವಿಧಾನಿಕ ಮತ್ತು ಸಾಮಾಜಿಕ ನ್ಯಾಯ. ಅದನ್ನು ಸರಕಾರ ಸಂಪುಟದಲ್ಲಿ ಅನುಮೋದನೆ ಪಡೆದು ಶೀಘ್ರವೇ ಅನುಷ್ಠಾನಗೊಳಿಸಬೇಕು. ಸಾವಿರಾರು ವರ್ಷಗಳಿಂದ ನಮ್ಮನು ತುಳಿದಿದ್ದಾರೆ, ಒಳಮೀಸಲಾತಿ ಬೇಕೆಂದು ನಾವ್ಯಾರೂ ಕಲ್ಲು ಹೊಡೆದಿಲ್ಲ, ಹೋರಾಟ ಮಾಡಿಕೊಂಡೇ ಬಂದಿದ್ದೇವೆ. ಎಂದು ಒತ್ತಾಯಿಸಿದರು.

ಹಲಗೇರಿ ಮಂಜಪ್ಪ ವಕೀಲರು ಮಾತನಾಡಿ, ಸುಪ್ರೀಂ ಕೋರ್ಟ್ ತೀರ್ಪನ್ನು ನಿರ್ಲಕ್ಷಿಸುತ್ತಿರುವ ರಾಜ್ಯ ಸರಕಾರಕ್ಕೆ ಬಿಸಿ ಮುಟ್ಟಿಸುವ ಸಲುವಾಗಿ ಛಲವಾದಿ ಮತ್ತು ಮಾದಿಗ ಸಮುದಾಯಗಳು ಒಗ್ಗೂಡಿ ಹೋರಾಟ ನಡೆಸುತ್ತಿವೆ. ಕೂಡಲೇ ರಾಜ್ಯ ಸರಕಾರ ಒಳಮೀಸಲಾತಿಯನ್ನು ಜಾರಿಗೊಳಿಸಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ದಲಿತ ಮುಖಂಡ ಕಣವಿಹಳ್ಳಿ ಮಂಜುನಾಥ ಮಾತನಾಡಿ, 2016ರಲ್ಲಿ ಒಳಮೀಸಲಾತಿಯನ್ನು ನಿರ್ಲಕ್ಷಿಸಿ 2018ರಲ್ಲಿ ಸಿದ್ದರಾಮಯ್ಯ ಸೋತಿದ್ದಾರೆ. ಅದೇ ರೀತಿ ಬಿಜೆಪಿಯೂ ನಿರ್ಲಕ್ಷಿಸಿ ಸೋತಿದೆ. >>4

# ನವೆಂಬರ್ 1 ಕರ್ನಾಟಕ ರಾಜ್ಯೋತ್ಸವ ದೇಗುಲಗಳಿಗೆ ವಿದ್ಯುತ್ ದೀಪಾಲಂಕಾರ

■ **ಹಂಪಿ ಟೈಮ್ಸ್ ಹೊಸಪೇಟೆ**

ಬಳ್ಳಾರಿ, ವಿಜಯನಗರ ಜಿಲ್ಲೆಯಲ್ಲಿನ ಎಲ್ಲಾ ಧಾರ್ಮಿಕ ಸಂಸ್ಥೆಗಳ ಹಾಗೂ ದೇವಸ್ಥಾನಗಳ ಆಡಳಿತಾಧಿಕಾರಿಗಳು, ಕಾರ್ಯನಿರ್ವಹಣಾಧಿಕಾರಿಗಳ, ಆಡಳಿತ ಮುಖ್ಯಸ್ಥರು ನವೆಂಬರ್ 1 ರಂದು ಆಚರಿಸುವ ಕರ್ನಾಟಕ ರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಅಕ್ಟೋಬರ್ 31 ಮತ್ತು ನವೆಂಬರ್ 1 ರಂದು ತಮ್ಮ ವ್ಯಾಪ್ತಿಯಲ್ಲಿನ ಸಂಸ್ಥೆಗಳಿಗೆ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಮಾಡಬೇಕೆಂದು ಮತ್ತು ನವೆಂಬರ್ 1 ರಂದು ವಿಶೇಷ ಪೂಜೆ, ಪ್ರಾರ್ಥನೆ ವ್ಯವಸ್ಥೆ ಮಾಡಿಸುವಂತೆ ಬಳ್ಳಾರಿ ವಿಜಯನಗರ ಜಿಲ್ಲೆಯ ಧರ್ಮಾದಾಯ ದತ್ತಿಗಳ ಇಲಾಖೆಯ ಹಿಂದೂ ಧಾರ್ಮಿಕ ಸಂಸ್ಥೆಗಳು ಸಹಾಯಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅ.29ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಹೊಸಪೇಟೆ**

ಜೆಸ್ಕಾಂ ಕಮಲಾಪುರದ 110/11ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ ಅಕ್ಟೋಬರ್ 29 ರಂದು ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಅಂದು ಕಮಲಾಪುರ ವ್ಯಾಪ್ತಿಗೆ ಬರುವ ಕಮಲಾಪುರ ಪಟ್ಟಣ ಪಂಚಾಯಿತಿ, ಬುಕ್ಕಸಾಗರ, ಸೀತರಾಮ ತಾಂಡ, ಮಲಪನಗುಡಿ, ಹಂಪಿ, ಪಾಪಿನಾಯಕನಹಳ್ಳಿ, ಗಾದಿಗನೂರು ಮತ್ತು ಬೈಲುವದ್ದಿಗೇರೆ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗೆ ಬರುವ ಗ್ರಾಮಗಳಿಗೆ ಹಾಗೂ ನೀರಾವರಿ ಪಂಪ್ ಸೆಟ್ ರೈತರಿಗೆ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ಹಾಗೂ ರೈತರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಂಎಸ್‌ಪಿಎಲ್‌ಗೆ ಪ್ರಶಸ್ತಿ




**ದೆಹಲಿಯಲ್ಲಿ ಎಕನಾಮಿಕ್ಸ್ ಟೈಮ್ಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಹೊಸಪೇಟೆಯ ಎಂ ಎಸ್ ಪಿ ಎಲ್ ಸಂಸ್ಥೆಯ ಒಟ್ಟಾರೆ ಸಾಮಾಜಿಕ ಸೇವೆಯನ್ನು ಪರಿಗಣಿಸಿ, 2022–23 ನೇ ಸಾಲಿನ ಪ್ರತಿಷ್ಠಿತ ET 2 GOOD 4 GOOD ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಎಂ ಎಸ್ ಪಿ ಎಲ್ ಸಂಸ್ಥೆಯ ಸಾಮಾಜಿಕ ಸೇವಾ ವಿಭಾಗದ ಉಪಾಧ್ಯಕ್ಷ ಹೆಚ್ ಕೆ ರಮೇಶ್ ಉಪಸ್ಥಿತರಿದ್ದು ಪ್ರಶಸ್ತಿ ಪತ್ರ ಸ್ವೀಕರಿಸಿದರು.**




ಹಂಪಿ ಟೈಮ್ಸ್
HAMPI TIMES

## ಬೆಳಕಿನ ಹಾದಿ

# ಜೀವಂತ ದೇವರುಗಳಿಗೆ ವೇದನೆ ಯಾಕೆ?

■ ಜಯಶ್ರೀ.ಎಂ.ಕರ್ಜಗಿ. ಹುಬ್ಬಳ್ಳಿ.



ಸುನಂದಮ್ಮ ಹಾಗೂ ಶಿವಾನಂದ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು. ಹಿರಿ ಮಗ ಬೇರೆ ಊರಲ್ಲಿ ನೌಕರಿ ಮಾಡುತ್ತಿದ್ದ. ಕಿರಿ ಮಗ ಅಪ್ಪ ಅಮ್ಮನ ಜೊತೆಗೆ ಇದ್ದ. ಅವನು ಆಗಾಗ 'ನಾನಷ್ಟೆ ಅಪ್ಪ ಅಮ್ಮನನ್ನು ನೋಡಿಕೊಳ್ಳಬೇಕು. ಅಣ್ಣ ಮಜಾ ಮಾಡಿಕೊಂಡು ಆರಾಮಾಗಿ ಇದ್ದಾನೆ' ಅಂತ ಜಗಳ ತೆಗೆಯುತ್ತಿದ್ದ. ಅಮ್ಮ ತಾನೆ ಏನು ಮಾಡುತ್ತಾಳೆ. ಮಗನ ಚುಚ್ಚು ಮಾತಿಗೆ ಒಳಗೊಳಗೆ ನೋವು ಅನುಭವಿಸುತ್ತಿದ್ದಳು. ಗಂಡ ಇಬ್ಬರು ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಟ್ಟಿದ್ದರು. ಬರುವ ಸಂಬಳದಲ್ಲಿ ಮಕ್ಕಳನ್ನು ತುಂಬಾ ಚೆನ್ನಾಗಿ ಅಲ್ಲದಿದ್ದರೂ ಏನೂ ಕೊರತೆ ಬರದ ಹಾಗೆ ಬೆಳೆಸಿದ್ದ.

ಈಗಿನ ಕಾಲದ ಮಕ್ಕಳು ಐಷಾರಾಮಿ ಜೀವನ ಬೇಡುತ್ತಾರೆ. ಕಿರಿಯ ಮಗ 'ಅವರ ಮಕ್ಕಳು ಹಾಗೆ, ಇವರ ಮಕ್ಕಳು ಹೀಗೆ, ನಾವು ಏನೂ ಇಲ್ಲದವರು' ಅಂತ ಯಾವಾಗಲೂ ಹೀಯಾಳಿಸುತ್ತಿದ್ದ. ಹಿರಿ ಮಗ ಹಬ್ಬಕ್ಕೆ ಮಾತ್ರ ಬರುತ್ತಿದ್ದ. ಮನೆಯ ಕಡೆ ಗಮನ ಕೊಡುತ್ತಿರಲಿಲ್ಲ. ಇದನ್ನೆಲ್ಲಾ ನೋಡಿದ ಸುನಂದಮ್ಮನಿಗೆ ಆಗಾಗ 'ನಾನು ಮಕ್ಕಳನ್ನು ಸರಿಯಾಗಿ ಬೆಳೆಸಿರಲಿಲ್ಲವೇ? ಇಬ್ಬರೂ ನಾನು ಹೆತ್ತ ಮಕ್ಕಳೇ? ಎಂಬ ನೋವು ಕಾಡುತ್ತಿತ್ತು. ಗಂಡನಿಗೆ ಈ ಬಗ್ಗೆ ಹೇಳಿದರೆ ಕಿವಿಮೇಲೆ ಹಾಕಿಕೊಳ್ಳುತ್ತಿರಲಿಲ್ಲ.

ಸುನಂದಮ್ಮನಿಗೆ ತವರು ಮನೆ ಇರಲಿಲ್ಲ. ತನ್ನ ನೋವನ್ನು ಹಂಚಿಕೊಳ್ಳಲು ಇದ್ದವಳು ಎಂದರೆ ಅಕ್ಕ ಮಾತ್ರ. ಅವಳೋ ಅವಶ್ಯಕತೆ ಇದ್ದಾಗ ಮಾತ್ರ ಫೋನಿನಲ್ಲಿ ಮಾತನಾಡುತ್ತಿದ್ದಳು. ಸುನಂದಮ್ಮನಿಗೆ ಒಂಟಿ ಜೀವನ ಸಾಕು ಸಾಕಾಗಿತ್ತು. ಅವಳ ಬಾಲ್ಯ ಕೂಡಾ ಕಷ್ಟದಿಂದ ಕೂಡಿತ್ತು. ಹೀಗಾಗಿ 'ಹುಟ್ಟಿದರೆ ಶ್ರೀಮಂತರ ಮನೆಯಲ್ಲಿ ಹುಟ್ಟಬೇಕು. ಈ ಮಧ್ಯಮ ವರ್ಗದ ಜನ ಆರಕ್ಕೆ ಏರಲ್ಲ, ಮೂರಕ್ಕೆ ಇಳಿಯಲ್ಲ. ನಿತ್ಯವೂ ನಾಳೆಯ ಬಗ್ಗೆ ಯೋಚನೆ ಮಾಡುತ್ತ ಬದುಕುವುದು ಇದೂ ಒಂದು ಜೀವನಾನ' ಎನ್ನುವಂತಾಗಿತ್ತು.

ದಿನೇ ದಿನೇ ಸುನಂದಮ್ಮನ ಆರೋಗ್ಯದಲ್ಲಿ ಏರುಪೇರು ಆಗುತ್ತಿತ್ತು. ಗಂಡನಿಗೆ ಹೇಳೋಕೆ ಆಗದೇ, ಮಗನಿಗೆ ಹೇಳೋಕೆ ಆಗದೇ ಒದ್ದಾಡುತ್ತಿದ್ದಳು. ಮಗನಿಗೆ ಮಾತ್ರೆ ತಂದುಕೊಡು ಅಂತ ಹೇಳೊಕೂ ಭಯಪಡುತ್ತಿದ್ದಳು. ಹೇಳಿದರೂ 'ನನ್ನದು ಸಣ್ಣ ಸಂಬಳ. ನನಗೇ ಸಾಲಲ್ಲ. ನಿನ್ನ ದೊಡ್ಡ ಮಗನಿಗೆ ದುಡ್ಡ ಕಳಿಸೋಕೆ ಹೇಳು' ಎಂಬ ಮಗನದೊಂದು ಡೈಲಾಗ್ ಸದಾ ಸಿದ್ದವಾಗಿರುತ್ತಿತ್ತು.

ಸುನಂದಮ್ಮನಿಗೆ ಕಷ್ಟ ಸಹಿಸಿಕೊಂಡು, ನೋವುಂಡು ಸಾಕಾಗಿ ಹೋಗಿತ್ತು. ಅದೊಂದು ದಿನ ತಾಳ್ಮೆಯ ಕಟ್ಟೆ ಒಡೆದಿತ್ತು. 'ದಿನವೂ ನಿಮ್ಮೆಲ್ಲರಿಗೂ ಕೂಳು ಬೇಯಿಸಿ ಹಾಕುತ್ತಾ, ಮನೆಕೆಲಸ ಮಾಡೋದು ಕಣ್ಣಿಗೆ ಕಾಣೊದಿಲ್ವಾ. ಒಂದು ಮಾತ್ರೆ ತಂದುಕೊಡೋಕೆ ಆಗದವನು ನೀನೆಂತ ಮಗ' ಎಂದು ಕೂಗಾಡಿದಳು. ಮಾತಿಗೆ ಮಾತು ಶುರುವಾಗಿ ಜಗಳ ತಾರಕಕ್ಕೇರಿತು. ಸಿಟ್ಟಿನಲ್ಲಿ ಮಗ ತಾಯಿಗೆ ಹೊಡೆಯಲು ಕೈ ಎತ್ತಿದ. ಒಂದು ಕ್ಷಣ ಸುನಂದಮ್ಮ ಗಾಬರಿಯಾದಳು. ಅಂದೇ ಕೊನೆ. ಮಗನ ಮುಂದೆ ಇನ್ನು ಯಾವೊತ್ತೂ ಯಾವುದಕ್ಕೂ ಕೈಚಾಚಬಾರದು ಎಂದು ನಿರ್ಧರಿಸಿದಳು. ಅವನ ಜೊತೆ ಅವಶ್ಯಕತೆ ತಕ್ಕಷ್ಟು ಮಾತ್ರ ಮಾತನಾಡುತ್ತಿದ್ದಳು. ಮೌನಕ್ಕೆ ಶರಣಾದಳು.

ಹೀಗೆ ಅದೆಷ್ಟೋ ಅಪ್ಪ-ಅಮ್ಮ ತಮ್ಮ ಮಕ್ಕಳಿಂದ ನಿತ್ಯವೂ ನೋವು ಅನುಭವಿಸುತ್ತಿದ್ದಾರೆ. ಕಷ್ಟಪಟ್ಟು ಸಾಕಿದ ಅಪ್ಪ ಅಮ್ಮನಿಗೆ ಮರ್ಯಾದೆ ಕೊಡಿ. ಅವು ವಯಸ್ಸಾದ ಜೀವಿಗಳು. ನಾಳೆ ನೀವೂ ಅಪ್ಪ ಅಮ್ಮ ಆಗುತ್ತೀರಿ. ಆಗ ನೀವು ಮಾಡಿದ್ದು ನಿಮಗೆ ಗೊತ್ತಾಗುತ್ತೆ. ಆ ವೇಳೆಗೆ ಸಮಯ ಮಿಂಚಿ ಹೋಗಿರುತ್ತೆ. ಪ್ರತಿ ತಾಯಿ ಮಗುವನ್ನು ಹೆರುವ ಸಮಯದಲ್ಲಿ ಸತ್ತು ಬದುಕುತ್ತಾಳೆ. ಅಂತಹ ತಾಯಿ ತನಗಲ್ಲದಿದ್ದರೂ ತನ್ನ ಮಕ್ಕಳಿಗೆ ತಂದು ಕೊಡುತ್ತಾಳೆ. ಅಂತಹ ಅಪ್ಪ-ಅಮ್ಮನಿಗೆ ದಯವಿಟ್ಟು ಯಾರೂ ನೋವು ಕೊಡಬೇಡಿ. ಸಾಧ್ಯವಾದಷ್ಟೂ ಗೌರವ ಕೊಡಿ. ಅದೇ ನೀವು ಮಾಡುವ ಉಪಕಾರ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ದಿವ್ಯಾಂಗ ಹೈಜಂಪರ್ ನಿಶಾದ್ ಕುಮಾರ್

ಕೃಷಿ ಕುಟುಂಬದಲ್ಲಿ ಜನಿಸಿದ ನಿಶಾದ್ ಆರು ವರ್ಷದ ವಯಸ್ಸಿನವವರಿರುವಾಗ ಮೇವು ಕತ್ತರಿಸುವ ಯಂತ್ರಕ್ಕೆ ಆಕಸ್ಮಿಕವಾಗಿ ಸಿಲುಕಿ ತನ್ನ ಬಲ ಮುಂಗೈ ಕಳೆದುಕೊಂಡು ಮುಂದೆ ಇದೆ ವ್ಯಕ್ತಿ ಪ್ಯಾರಾ ಒಲಿಂಪಿಕ್ಸ್ ನಲ್ಲಿ ಪದಕ ಗೆಲ್ಲುವುದು ನಿಜಕ್ಕೂ ಸಾಧನೆಯೇ ಸರಿ.



ಸ್ವತಹ ರಾಜ್ಯ ಮಟ್ಟದ ವಾಲಿಬಾಲ್ ಮತ್ತು ಡಿಸ್ಕಸ್ ಎಸೆತಗಾರ್ತಿಯಾದ ತನ್ನ ತಾಯಿಯಿಂದ ಸ್ಪೂರ್ತಿ ಪಡೆದು ಅಂಜದೇ ಅಳುಕದೆ ವಿದೇಶಿ ನೆಲದಲ್ಲಿ ಕೆಚ್ಚೆದೆಯ ಕ್ರೀಡಾ ಸಾಮರ್ಥ್ಯವನ್ನು ಪ್ರದರ್ಶಿಸಿ ಭಾರತಮಾತೆಯ ಕೊರಳಿಗೆ ಪದಕವನ್ನು ಸೇರ್ಪಡೆಗೊಳಿಸಿದ ಸಾಧಕ ನಿಶಾದ್.

3 ಅಕ್ಟೋಬರ್ 1999 (ವಯಸ್ಸು 25)ಅಂಬ್,ಹಿಮಾಚಲ ಪ್ರದೇಶ, ಬಾದೌನ್ ಗ್ರಾಮ ಇಲ್ಲಿ ಜನಿಸುತ್ತಾರೆ ತಂದೆ ರಸ್ಪಾಲ್ ಸಿಂಗ್ ತಾಯಿ ಪುಷ್ಪಾದೇವಿ ಸಹೋದರಿ ರಮಾದೇವಿ ಕೃಷಿಕ ಕುಟುಂಬ ಹೇಳಿಕೊಳ್ಳುವಂತಹ ಸಿರಿವಂತಿಕೆ ಇರದೆ ಸಾಕಷ್ಟು ಕಷ್ಟವನ್ನು ಅನುಭವಿಸಿದ್ದಾರೆ.

ತನ್ನ ಮುಂಗೈ ಕತ್ತರಿಸಲ್ಪಟ್ಟಿದ್ದರು ಶಾಲೆಯಲ್ಲಿ ಓದುವಾಗ 200 ಮೀಟರ್ ಓಟ ಮತ್ತು 400 ಮೀಟರ್ ಓಟ,ಕುಸ್ತಿ,ಜಾವಲಿನ್ ಎಸೆತ ಜೊತೆಗೆ ಎತ್ತರದ ಜಿಗಿತ ಕ್ರೀಡೆಯಲ್ಲಿ ತೊಡಗಿಸಿಕೊಂಡರು ತಂದೆಯೊಟ್ಟಿಗೆ ಕ್ರಿಕೆಟ್ ಆಡುವುದೆಂದರೆ ಇವರಿಗೆ ಎಲ್ಲಿಲ್ಲದ ಸಂತಸ.

2013 ರ ಪಟಿಯಾಲದಲ್ಲಿ ನಡೆದ ರಾಷ್ಟ್ರೀಯ ಶಾಲಾ ಕ್ರೀಡಾಕೂಟದಲ್ಲಿ ಸಬ್-ಜೂನಿಯರ್ ಹೈಜಂಪ್ ವಿಭಾಗದಲ್ಲಿ 1.83 ಮೀಟರ್ ಜಿಗಿತದೊಂದಿಗೆ ಬೆಳ್ಳಿ ಪದಕ ಪಡೆದಿರುತ್ತಾರೆ.

ನೀರಜ್ ಚೋಪ್ರಾ ಅವರ ಮಾಜಿ ತರಬೇತುದಾರರಾದ ಅಹ್ಮದ್ ಮತ್ತು ವಿಕ್ರಂಚೌಧರಿ ಇವರ ಬಳಿ ತರಬೇತಿಯನ್ನು ಪಡೆದು 2017ರಲ್ಲಿ ಪ್ಯಾರಾ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಲು ಆರಂಭಿಸಿದರು.

ನಿಶಾದ್ ದುಬೈನಲ್ಲಿ ನಡೆದ 2019 ರ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿ ಪುರುಷರ ಹೈ ಜಂಪ್ ಟಿ-47 ವಿಭಾಗದಲ್ಲಿ ಕಂಚಿನ ಪದಕ ಪಡೆದಿರುತ್ತಾರೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381
Scan For Digital Colourful
HAMPI TIMES E-paper

ಟಿ-47 ವರ್ಗವು ಭುಜ,ಮೊಣಕೈ ಮತ್ತು ಮಣಿಕಟ್ಟಿನ ಕಾರ್ಯದಲ್ಲಿ ಕೆಲವು ನಷ್ಟಕ್ಕೆ ಕಾರಣವಾಗುವ ಏಕ ಪಕ್ಷೀಯ ಮೇಲಿನ ಅಂಗ ದುರ್ಬಲತೆ ಹೊಂದಿರುವ ಕ್ರೀಡಾಪಟು ಗಳಿಗೆ ಇರುವ ವಿಭಾಗವಾಗಿದೆ.

ಇವರಿಗೆ 2021 ಅತ್ಯಂತ ಯಶಸ್ವಿ ವರ್ಷ ದುಬೈನಲ್ಲಿ 2021 ರ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾಂಡ್ ಪ್ರಿಕ್ಸ್‌ನಲ್ಲಿ 12 ನೇ ಫಜಾ ಇಂಟರ್ನ್ಯಾಷನಲ್ ಚಾಂಪಿಯನ್‌ಶಿಪ್‌ನಲ್ಲಿ ಟಿ-46 ವಿಭಾಗದಲ್ಲಿ ಚಿನ್ನದ ಪದಕವನ್ನು ಗೆಲ್ಲುವ ಮೂಲಕ ಅವರು ವರ್ಷವನ್ನು ಶುಭಾರಂಭ ಮಾಡಿರುತ್ತಾರೆ.



ನಂತರ ಅವರು ಟಿ-47 ವಿಭಾಗದಲ್ಲಿ ಟೋಕಿಯೊ 2020 ಪ್ಯಾರಾಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕವನ್ನು ಗೆದ್ದು 2.06 ಮೀಟರ್ ಜಿಗಿತದೊಂದಿಗೆ ಏಷ್ಯನ್ ದಾಖಲೆಯನ್ನು ಸ್ಥಾಪಿಸಿದ್ದಾರೆ.

ಅಂದಿನಿಂದ ನಿಶಾದ್ ಗೆಲುವಿನ ಫಾರ್ಮ್ ಮುಂದುವರಿಸಿ 2022 ರ ಹ್ಯಾಂಗ್‌ಝೌನಲ್ಲಿ ನಡೆದ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ.

2023 ಪ್ಯಾರಿಸ್ ಮತ್ತು 2024 ಕೋಬ್ ಪ್ಯಾರಾ ಅಥ್ಲೆಟಿಕ್ಸ್ ವಿಶ್ವ ಚಾಂಪಿಯನ್‌ಶಿಪ್‌ಗಳಲ್ಲಿ ತಲಾ ಒಂದು ಬೆಳ್ಳಿ ಪದಕಗಳನ್ನು ಗೆದ್ದು ಗೆಲುವಿನ ನಾಗಾಲೋಟವನ್ನು ಮುಂದುವರಿಸಿರುತ್ತಾರೆ.

2024ರ ಪ್ಯಾರಿಸ್ ಪ್ಯಾರಾ ಒಲಂಪಿಕ್ಸ್ ನಲ್ಲಿ ಬೆಳ್ಳಿ ಪದಕವನ್ನು ಪಡೆಯುವ ಮೂಲಕ ವಿಶ್ವದ ಪ್ರಮುಖ ಪ್ಯಾರಾ-ಅಥ್ಲೀಟ್‌ಗಳಲ್ಲಿ ಒಬ್ಬನಾಗಿ ತನ್ನನ್ನು ತಾನು ಗುರುತಿಸಿಕೊಂಡು ಭಾರತಕ್ಕೆ ಕೀರ್ತಿ ತಂದಿರುತ್ತಾರೆ.

ಇದಲ್ಲದೆ ಈ ಹಿಂದೆ 2017(ಪಂಚಕುಲ)ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಪುರುಷರ ಎತ್ತರ ಜಿಗಿತದಲ್ಲಿ (1.83 ಮೀ) ಬೆಳ್ಳಿ ಪದಕ ಪಡೆದಿರುತ್ತಾರೆ.

ನಿಶಾದ್ ಚಂಡೀಗಢದ ಸೆಕ್ಟರ್ 10 ರಲ್ಲಿ ಡಿ,ಎ,ವಿ.ಕಾಲೇಜಿನಲ್ಲಿ ಪದವಿ ಶಿಕ್ಷಣವನ್ನು ಪೂರೈಸಿ,ಹಿಮಾಚಲ ಪ್ರದೇಶ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣವನ್ನು ಪಡೆದು ಪಂಜಾಬಿನ ಲವ್ಲಿ ಪ್ರೊಫೆಷನಲ್ ಯೂನಿವರ್ಸಿಟಿಯಲ್ಲಿ ದೈಹಿಕ ಶಿಕ್ಷಣ ಅಧ್ಯಯನ ಮಾಡುತ್ತಿದ್ದಾರೆ.

ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಇವರ ಸಾಧನೆಯನ್ನು ಪ್ರಶಂಶಿಸಿ ಗೌರವಿಸಿರುತ್ತಾರೆ.

ನಿಶಾದ್ ಅವರು ಬೆಂಗಳೂರಿನಲ್ಲಿರುವ ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ (ಸಾಯ್) ದಿನಕ್ಕೆ ಎರಡು ಬಾರಿ ತರಬೇತಿ ಪಡೆಯುತ್ತಾರೆ ಇವರ ತರಬೇತುದಾರರು ಸತ್ಯನಾರಾಯಣ ಶಿವಮೊಗ್ಗ ಮತ್ತು ವಿದೇಶಿ ತರಬೇತುದಾರರಾದ ಜೆರೆಮಿ ಫಿಶರ್.

2021ರಲ್ಲಿ ಭಾರತ ಸರ್ಕಾರ ಇವರ ಸಾಧನೆಗಳನ್ನು ಗಮನಿಸಿ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಿದೆ.

ದೇಶ ಸೇವೆ ಮಾಡಬೇಕೆಂಬ ಆಸೆಯಿಂದ ಮಿಲಿಟರಿಪಡೆ ಸೇರಲು ಬಯಸಿ,ದಿವ್ಯಾಂಗದ ತೊಂದರೆಯಿಂದ ನಿಮ್ಮ ಕನಸು ಈಡೇರಿಲ್ಲ ಎಂಬ ಕೊರಗು ನಿಮ್ಮನ್ನು ಕಾಡಬಹುದು ಇಂತಹ ಸಮಸ್ಯೆ ನಡುವೆಯೂ ಕ್ರೀಡೆಯ ಮೂಲಕ ಪದಕಗಳಿಸಿ ವಿಶ್ವಮಟ್ಟದಲ್ಲಿ ಭಾರತವನ್ನು ಗುರುತಿಸುವಂತೆ ಮಾಡಿದ್ದು ಅತ್ಯುನ್ನತ ದೇಶ ಸೇವೆಯೇ ಸರಿ ಒಳಿತಾಗಲಿ ನಿಮಗೆ.

# ಉದ್ಯೋಗದ ಸ್ಥಳಗಳಲ್ಲಿ ತಗ್ಗಲಿ ಹೊಟ್ಟೆಕಿಚ್ಚು

ನಾವು ಗಳಿಸಿದ ಉದ್ಯೋಗ ಚಿಕ್ಕದಾಗಿರಲಿ ಅಥವಾ ದೊಡ್ಡದಾಗಿರಲಿ ಕೆಲಸದ ಸ್ಥಳದಲ್ಲಿ ಮತ್ತೊಬ್ಬರೊಂದಿಗೆ ವರ್ತಿಸುವುದು ಒಂದು ಸೂಕ್ಷ್ಮ. ನಮ್ಮ ವರ್ತನೆ ತುಂಬ ಮುಖ್ಯ. ಹಾಗೆಯೇ ಪರರೊಂದಿಗೆ ತೋರುವ ಉತ್ತಮ ವರ್ತನೆ ಅಷ್ಟೇ ಮುಖ್ಯ. ಮಾನಸಿಕ ಒತ್ತಡ ಕೊಡುವುದು ಪಡೆದುಕೊಳ್ಳುವುದು ಎರಡು ತಪ್ಪು. ಉದ್ಯೋಗದ ಸ್ಥಳಗಳಲ್ಲಿ ಕೆಲಸದ ಒತ್ತಡ, ಮಾನಸಿಕ ಒತ್ತಡ ಎಂಬುದು ಎಲ್ಲಾ ಕ್ಷೇತ್ರಗಳಲ್ಲೂ ಕಾಮನ್ .

ಇಷ್ಟೆಲ್ಲ ಒತ್ತಡಗಳ ಮಧ್ಯೇ ಸಹೋದ್ಯೋಗಿಗಳು ನೀಡುವ ಕಿರುಕಳ ಕ್ಲಿಷ್ಟಕರ ಎಂದೆನಿಸುತ್ತದೆ. ಹಾಗೆಯೇ ನಮ್ಮ ವರ್ತನೆ ಸಹ ಅವರಿಗೆ ಕಿರುಕುಳ ಎನಿಸುತ್ತದೆ. ದೈಹಿಕ ಕಿರುಕುಳವಲ್ಲ ಮಾನಸಿಕ ಕಿರುಕುಳ, ವರ್ತನಾತ್ಮಕ ಹಾಗೂ ಮಾತಿನ ಕಿರುಕುಳ. ಇಂತಹ ಕಿರುಕುಳ ನಿಜಕ್ಕೂ ಖೇದ ಉಂಟುಮಾಡುತ್ತದೆ. ದುರ್ಜನರೊಡನೆ ವಾದಕ್ಕಿಳಿಯುವ ಬದಲು ದೂರ ಉಳಿಯುವುದು ವಾಸಿ. ವಾದ ಮಾಡಿ ನಮ್ಮತನವನ್ನು ಕಳೆದುಕೊಳ್ಳುವುದು ಉಚಿತವಲ್ಲ.


ದುರ್ಜನರಿಂದ ಅಂತವರ ಮಾತಿನ ತಿವಿತಗಳಿಂದ ದೂರವಿರುವುದು ಲೇಸು. ಕೆಟ್ಟ ಗುಣದವರಿಂದ ದೂರವಿರುವುದು ಒಳ್ಳೆಯದು ಇಂತಹ ಗುಣಗಳನ್ನೂ ಹೊಂದುವುದು ತರವಲ್ಲ. ಒಬ್ಬ ವ್ಯಕ್ತಿ ಇಂತಹ ಗುಣಗಳನ್ನು ಹೊಂದುವುದು ತರವಲ್ಲ ಕೆಟ್ಟ ಗುಣಗಳನ್ನು ಹೊಂದಿದ್ದರೆ ಎಲ್ಲರಿಂದ ನಿರ್ಲಕ್ಷಕ್ಕೆ ಒಳಗಾಗುತ್ತಿರಿ ಜೋಕೆ. ಕೆಟ್ಟ ಗುಣಗಳನ್ನು ಹೊಂದುವುದು ಇನ್ನೊಬ್ಬರಿಂದ ಅನುಭವಿಸುವುದು ಎರಡು ಹಿಂಸೆ ಎಂದೆನಿಸುತ್ತದೆ. ನಾವು ಇನ್ನೊಬ್ಬರಿಂದ ಎಂತಹ ವರ್ತನೆ ಅಪೇಕ್ಷಿಸುತ್ತೇವೆಯೋ ಅಂತಹ ವರ್ತನೆಗಳನ್ನು ನಮ್ಮಲ್ಲಿ ಮೈಗೂಡಿಸಿಕೊಳ್ಳಬೇಕು. ನಾವು ಹೊಂದಬೇಕು. ಹಾಗಾದರೆ ಉದ್ಯೋಗ ಸ್ಥಳಗಳಲ್ಲಿ ನಮ್ಮ ವರ್ತನೆ ಹೇಗಿರಬೇಕು? ಅಂತಹ ಗುಣಗಳ ಹಾಗೂ ವರ್ತನೆಗಳ ಪಟ್ಟಿ ಇಲ್ಲಿದೆ.

### ಹೊಟ್ಟೆಕಿಚ್ಚು :-

ಹೊಟ್ಟೆಕಿಚ್ಚು ಎಲ್ಲರ ಜಾಯಮಾನಕ್ಕೂ ಸಾಮಾನ್ಯ. ಇದು ತೃಪ್ತರ ನಡವಳಿಕೆ ಅಲ್ಲ. ಅತೃಪ್ತರ ಗುಣ. ಹೊಟ್ಟೆಕಿಚ್ಚಿನ ಪ್ರವೃತ್ತಿ ಚಿಕ್ಕವಯಸ್ಸಿನಲ್ಲಿ ತಿಳುವಳಿಕೆ ಮೂಡಿದಾಗಲೇ ಪ್ರಾರಂಭವಾಗುತ್ತದೆ. ಸಾಮಾನ್ಯವಾಗಿ ಹೊಟ್ಟೆಕಿಚ್ಚು, ಹೊಟ್ಟೆಯುರಿ ಆರಂಭವಾಗುವುದು ಮತ್ತೊಬ್ಬರ ಯಶಸ್ಸು ಕಂಡು ಮತ್ತೊಬ್ಬರ ಏಳಿಗೆ ಕಂಡು. ಒಬ್ಬರು ಮತ್ತೊಬ್ಬರನ್ನು ಹೋಗಳಿದಾಗ ಇನ್ನೊಬ್ಬರಿಗೆ ಕೋಪ, ಹತಾಶೆ, ಬೇಜಾರು, ನಿರಾಶೆ ಈ ಎಲ್ಲ ಗುಣಗಳ ಮಿಶ್ರಣವೇ ಹೊಟ್ಟೆಕಿಚ್ಚು.

ಹೊಟ್ಟೆಕಿಚ್ಚಿನ ಗುಣಗಳನ್ನು ಹೋಗಲಾಡಿಸುವುದು ಸುಲಭ. ಮತ್ತೊಬ್ಬರ ಯಶಸ್ಸನ್ನು ಸಂಭ್ರಮಿಸುವುದು. ಸಂತಸಪಡುವುದು. ಆನಂದಿಸುವುದು. ಅಭಿನಂದಿಸುವುದು ಅಷ್ಟೇ.

ಮತ್ತೊಬ್ಬರ ಯಶಸ್ಸು ಕಂಡು ಸಂತಸಪಡಬೇಕೇ ವಿನಃ ಹೊಟ್ಟೆಕಿಚ್ಚು



ಹೊಂದಬಾರದು. ಇನ್ನೊಬ್ಬರ ಏಳಿಗೆ ಕಂಡು ಮೂಗು ಮುರಿಯುವುದು ಒಳಿತಲ್ಲ. ಹೊಟ್ಟೆಕಿಚ್ಚಿನ ಪ್ರವೃತ್ತಿ ಬಿಡುವುದೇ ಒಳಿತು. ಸಾಧ್ಯವಾದರೆ ಯಶಸ್ಸು ಸಾಧಿಸಿದವನ ಬಗ್ಗೆ ಎರಡು ಒಳ್ಳೆಯ ಮಾತನಾಡುವುದು ಅವರಿಗೂ ಖುಷಿ ನಮ್ಮ ಮನಸ್ಸಿಗೂ ಹಿತ.

ಇನ್ನೊಬ್ಬರ ಸಾಧನೆ ಕುರಿತು ಹೊಟ್ಟೆಕಿಚ್ಚು ಪಡದೇ ಅವರ ಮಾರ್ಗದಲ್ಲಿ ನಾವು ಹೆಜ್ಜೆ ಹಾಕಿದರೆ, ನಾವು ಯಶಸ್ಸು ಸಾಧಿಸಬಹುದು ಮತ್ತೊಬ್ಬರ ಯಶಸ್ಸು ಕಂಡು ನಾವು ಹೊಟ್ಟೆಕಿಚ್ಚು ಪಟ್ಟುಕೊಂಡರೆ ಬಸವಣ್ಣ ಹೇಳಿದಂತೆ ತನ್ನ ಮನದೊಳಗಣ ಕಿಚ್ಚು ತನ್ನನ್ನು ಸುಡದೆ ನೆರೆಮನೆಯವರನ್ನು ಸುಡದು ಕೂಡಲಸಂಗಮದೇವ ಎಂಬಾತಾದೀತು.

### ಚಾಡಿ ಹೇಳುವುದು :-

ಚಾಡಿ ಹೇಳುವುದು ಇದೊಂದು ಚಟ. ಇದನ್ನು ಬಾಲ್ಯವಸ್ಥೆಯಲ್ಲಿ ಚಿವುಟಿ ಹಾಕುವುದು ಒಳಿತು. ಇಲ್ಲವಾದಲ್ಲಿ ಪ್ರೌಢಾವಸ್ಥೆ, ಯವ್ವನವಸ್ಥೆ,ವೃದಾಪ್ಯಕ್ಕೆಬಂದಾಗ ಇದೇ ಗುಣ ಮುಂದುವರೆಯುತ್ತದೆ.

ಸಾಧ್ಯವಾದರೆ ಪರರ ಕುರಿತು ಒಳ್ಳೆಯದನ್ನು ಮಾತನಾಡಿ ಬದಲಿಗೆ ಚಾಡಿ ಹೇಳುವುದು ತರವಲ್ಲ. ಚಾಡಿ ಮಾತುಗಳನ್ನು ಕೇಳುವುದು, ಹೇಳುವುದು ತಪ್ಪು.ಇನ್ನೊಬ್ಬರ ವಿರುದ್ಧ ಚಾಡಿ ಮಾತುಗಳನ್ನನಾಡಿ ನಮಗೇನು ತಾನೇ ದೊರೆತೀತು.

ಚಾಡಿ ಹೇಳುವುದು ಕೆಟ್ಟ ಮಾತುಗಳನ್ನು ಕೆಟ್ಟ ವರ್ತನೆಗಳನ್ನು ಹಂಚಿಕೊಂಡಂತೆ. ಇದರ ಬದಲು ಎಲ್ಲರ ಬಗ್ಗೆ ಒಳ್ಳೆಯ ಮಾತುಗಳನ್ನಾಡಿ ಇದರಿಂದ ನಿಮ್ಮ ವರ್ತನೆ ಒಳ್ಳೆ ರೀತಿಯಲ್ಲಿ ಪಸರಿಸಲಿದೆ. ಚಾಡಿ ಮಾತುಗಳನ್ನು ಆಡಿ ಕೆಲಬಾರಿ ನೀವು ಸಣ್ಣವರಾಗಬಹುದು ಜೋಕೆ. ಇಲ್ಲಿ ಚಿಕ್ಕವರಾಗುವುದು ಚಾಡಿ ಹೇಳಿದವರೇ ಹೊರತು ಚಾಡಿ ಮಾತಿಗೆ ಬಲಿಯಾದವರಲ್ಲ.

### ಇನ್ಡೈರೆಕ್ಟ್ ಮಾತು :-



ದೀಪಶ್ರೀ ಎಸ್ ಕೂಡ್ಲಿಗಿ
ಶಿಕ್ಷಕಿ, ಹವ್ಯಾಸಿ ಬರಹಗಾರ್ತಿ
Scan For Digital Colourful
HAMPI TIMES E-paper

ಮನದಲ್ಲಿ ಯಾವುದೇ ವಿಷಯದ ಕುರಿತು ಗೊಂದಲಗಳಿದ್ದಲ್ಲಿ ನೇರವಾಗಿ ಮಾತನಾಡಿ ಪರಿಹರಿಸಿ ಕೊಳ್ಳುವುದು ಸಹ್ಯ. ಇಲ್ಲವಾದಲ್ಲಿ ಮನದ ಮಾತು ಮನದೊಳಗೆ ಉಳಿದರೆ ಇನ್ನಷ್ಟು ಗೋಜಲುಗಳಿಗೆ ಕಾರಣವಾಗುತ್ತದೆ. ಮತ್ತಷ್ಟು ದ್ವೇಷ ಬಿತ್ತರವಾಗುತ್ತದೆ. ಅದರ ಬದಲು ನೇರವಾಗಿ ಮಾತನಾಡಿ ಇನ್ಡೈರೆಕ್ಟ್ ಮಾತು ಮತ್ತಷ್ಟು ದ್ವೇಷ ಅಸೂಯೆಗೆ ಕಾರಣವಾಗುತ್ತದೆ. ನೇರವಾದ ಮಾತಗಳಿಂದ ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರೆಯುತ್ತದೆ. ನೇರವಾದ ಮಾತು ಧನಾತ್ಮಕ ಪರಿಣಾಮ ಬೀರಿದರೆ, ಇನ್ಡೈರೆಕ್ಟ್ ಮಾತು ಋಣಾತ್ಮಕ ಪರಿಣಾಮ ಬೀರಲಿದೆ. ಇದರಿಂದ ಇಬ್ಬರ ಮನದ ಮಾತುಗಳು ಕೇವಲ ಮೌನವಾಗಿಯೇ ಉಳಿಯುತ್ತವೆ. ಮಾತುಗಳು ಹೊರ ಬಾರದೇ ಮತ್ತಷ್ಟು ದ್ವೇಷ ಉಲ್ಬಣವಾಗುತ್ತದೆ. ಮಾತು ಹೊರ ಬಂದಾಗ ಸಮಸ್ಯೆಗಳಿಗೆ ನಾಂದಿಯಾಗುತ್ತದೆ.

### ಹೇಳಿಕೆ ಮಾತು :-

ಹೇಳಿಕೆ ಮಾತು ಕೇಳದಿರುವುದು ಉತ್ತಮ. ಕೆಲವೊಮ್ಮೆ ಹೇಳಿಕೆ ಮಾತು ಸತ್ಯವಾಗಿರಬಹುದು. ಕೆಲವೊಮ್ಮೆ ಸುಳ್ಳು ಆಗಿರಬಹುದು. ಎಲ್ಲವನ್ನು ಪರಮಾರ್ಶಿಸಿ ನೋಡುವುದು ಒಳಿತು. ಪ್ರತ್ಯಕ್ಷವಾಗಿ ಕಂಡರೂ ಪ್ರಾಮಾಣಿಸಿ ನೋಡುವುದು ಉತ್ತಮ. ಹೇಳಿಕೆ ಮಾತುಗಳನ್ನು ಕೇಳುವ ಬದಲು ಸತ್ಯವನ್ನು ಕುರಿತು ಯೋಚಿಸುವುದು ಒಳಿತು. ಹೇಳಿಕೆ ಮಾತುಗಳು ಮತ್ತೊಂದು ಜೀವಕ್ಕೆ ಕುಂದುಂಟು ಮಾಡಬಹುದು. ಹಿಂದೆ ಬೈಯ್ಯುವುದು, ಮುಂದೆ ಹೊಗಳುವುದು, ಹೇಳಿಕೆ ಮಾತು ನಂಬುವುದು ಮೋಸಕ್ಕೆ ಬಲಿಯಾದಂತೆ ಅರ್ಥ. ಹೇಳಿಕೆ ಮಾತಗಳನ್ನು ಕೇಳುವುದು ಮೋಸದ ವಶವಾದಂತೆ. ಹೇಳಿಕೆ ಮಾತುಗಳಿಗೆ ಕಿವಿಗೊಡದಿರಿ.

## ಕವಿ ಮನಸು

### ಅಹಂ ಬೇಡ ಗೆಳೆಯ



ನಾನು ನಾನೇ ಅಹಂ ಬೇಡ ಗೆಳೆಯ
ಒಬ್ಬರಿಗಿಂತ ಒಬ್ಬರು ಮಿಗಿಲು
ಅರ್ಥವಾದರೆ ಭಾರಿ ದಿಗಿಲು
ನೀನು ನನ್ನ ಮೇಲೆ ಸವಾರಿ
ನಾನು ನಿನ್ನ ಮೇಲೆ ಸವಾರಿ
ನಮ್ಮಿಬ್ಬರ ಮೇಲೆ ಇನ್ನೊಬ್ಬ ಸವಾರಿ
ಎಲ್ಲರ ಮೇಲೆ ಎಲ್ಲರ ಸವಾರಿ
ಅರಿವಿಗೆ ಬಾರದೇ ನಡೆವುದು ಸವಾರಿ!

**– ಚಂದ್ರಶೇಖರಯ್ಯ ರೋಣದಮಠ .**

### ದೀಪಾವಳಿ

ಬಂತೋ.. ಬಂತೋ.. ದೀಪಾವಳಿ ಬಂತೋ..
ತಂತೋ.. ತಂತೋ.. ಸಡಗರ ತಂತೋ..
ಸಿರಿ ತಂದಿತಪ್ಪ ಈ ಬೆಳಕಿನ ಹಬ್ಬ
ಸಂತಸದ ರೂಪ ಈ ದೀಪಾವಳಿ ಹಬ್ಬ
ಮನೆಯ ಅಂಗಳದಿ ಬಣ್ಣದ ರಂಗೋಲಿ
ಮನೆಯ ಬಾಗಿಲು ಮಾವಿನ ತೋರಣ
ಸಾಲು ಸಾಲು ಹಣತೆಯ ದೀಪ
ಅಂಗಳ ತುಂಬಿ ಬೆಳಗಿತೇ ದೀಪ
ಊರ ತುಂಬೆಲ್ಲಾ ಹೊಸತು ನೋಡಾ
ನಾಡಿನ ಜನದ ಹಿಗ್ಗು ನೋಡಾ
ಹಬ್ಬದ ಸಿರಿಗೆ ತುಪ್ಪದ ಘಮ ಘಮ
ಹಸಿರಿನ ಗರಿಗೆ ಸಂಭ್ರಮದ ಸಮ ಸಮ
ಹರಿಯುವ ನೀರಲ್ಲಿ ತಲೆ ಎಣ್ಣೆ ಸ್ನಾನ
ನಾರಿಯರ ಮುಡಿ ತುಂಬ ಮಲ್ಲಿಗೆ
ತರ ತರಹದ ಪಟಾಕಿ
ಬೆಳಕು ಬೀರಿ ಸಿಡಿಯುತ್ತೆ
ದೀಪಗಳ ಸಾಲು ಈ ದೀಪಾವಳಿ ಹಬ್ಬ
ಸಂತಸದ ರೂಪ ಈ ದೀಪಾವಳಿ ಹಬ್ಬ.

– ವಿ.ಎಂ.ಎಸ್.ಗೋಪಿ ಬೆಂಗಳೂರು

### ಕಳಂಕಿತೆ

ಸೀತಾ ಮಾತೆ ಮಹಾನ್ ಪ್ರತಿವ್ರತೆ
ರಾವಣ ಅಪಹರಿಸಿದಾಗ ಆಗಲಿಲ್ಲ
ವಿಚಲಿತೆ
ರಾಮ ನಾಮವ ಜಪಿಸಿದ ಮಾತೆ
ಸತಿ ಧರ್ಮವ ಅನುಸರಿಸಿದ ಪತಿತೆ

ವನವಾಸ ಮುಗಿಸಿ ಮರಳಿದಳು ಸೀತೆ
ಜನರು ಅನುಮಾನಿಸಿ ನುಡಿದರು ಕಲುಷಿತೆ
ಸೀತೆಯ ಅಗ್ನಿಪರೀಕ್ಷೆಯ ಗಾಥೆ
ಅಗ್ನಿಯು ದಹಿಸದೆ ಸಾಬೀತಾಯಿತವಳು
ನಿರ್ದೋಷಿತೆ

ಅಗಸನ ಮಾತಿನಿಂದ ರಾಮನಿಗಾಯಿತು
ಚಿಂತೆ
ರಾಜಧರ್ಮಕ್ಕಾಗಿ ನಿರ್ಧರಿಸಿದ ಅವಳು
ಕಳಂಕಿತೆ
ಮತ್ತೆ ವನವಾಸ ಉಂಡಳು ಲವಕುಶರ
ಜನುಮದಾತೆ
ಎಂದಿಗೂ ಅಮರ ಸೀತಾಮಾತೆಯ ಕಥೆ

**–ಚೇತನ ಭಾರ್ಗವ,** ಬೆಂಗಳೂರು

### ಹಸಾಗಸದ ಪ್ರೇಮದ ಬೆರಳುಗಳ ಆಟ

ಪ್ರೇಮ ಪ್ರಪಂಚದ ಹಸ್ತದಲಿ
ನಾ ಹೆಬ್ಬೆರಳು ನೀ ತೋರು ಬೆರಳು!
ಪ್ರೀತಿಯ ಲೇಖನಿ ನಡುವಿರಲು!
ಸಾಹಿತ್ಯದ ಕೃಷಿ ಮಾಡುವ ಬರವಣಿಗೆಯ
ಬಲವಾಗಿ ಮಧ್ಯದ ಬೆರಳು!
ಅಕ್ಷರಗಳು ಪದವಾಗಿ, ವಾಕ್ಯವಾಗಿ,
ಗೀತೆಯಾಗಿ,
ಕೊರಳ ಮುತ್ತಿನ ಮಾಲೆಯಂತಿರೆ ಉಂಗುರ
ಬೆರಳು!
ಸಹೃದಯರ ಹೃದಯಕ್ಕೆ ಲಗ್ಗೆ ಇಡಲು
ಅನುವು ಮಾಡಿಕೊಟ್ಟಿದುದು ಮತ್ತಾರು
ಅಲ್ಲ,ಈ ಕಿರುಬೆರಳು!
ಮತ್ತೆ ಮತ್ತೆ ಹೇಳುವೆ ಗೆಳೆಯ ನಾ ಹೆಬ್ಬೆರಳು
ನೀ ತೋರು ಬೆರಳು!
ಪ್ರೀತಿಯ ಲೇಖನಿ ನಡುವಿರಲು...
ಸುಂದರ ಲೇಖನ ಬರೆಯಿಸಿತು ಈ
ಬೆಳದಿಂಗಳು....
ಸುಂದರ ಲೇಖನ ಮೂಡಿಸಿಯೇ ಬಿಟ್ಟಿತು
ಈ ಸುಂದರ ಬೆಳದಿಂಗಳು... ಏನಂತೀರಿ?

**– ಪೂರ್ಣಿಮಾ. ಕೆ,**
ಉಪನ್ಯಾಸಕರು, ಕೊಟ್ಟೂರು.

# ವಿವಿಧ ಲೋಹದ ಪಾತ್ರೆಗಳಲ್ಲಿ ಆಹಾರ ಸೇವನೆ











ಹಿಂದಿನ ರಾಜ ಮಹಾರಾಜರು ಬೆಳ್ಳಿ ತಟ್ಟೆಯಲ್ಲಿ ಚಿನ್ನದ ಪಾತ್ರೆಗಳಲ್ಲಿ ಆಹಾರವನ್ನು ಸೇವಿಸುತ್ತಿದ್ದರು ಎಂದು ಕೇಳಿದಾಗ ಹೌದೇ? ಎಂದು ಮೂಗಿಗೆ ಬೆರಳಿಡುವ ನಾವು ಯಾರನ್ನಾದ್ರೂ ಶ್ರೀಮಂತರು ಎಂದು ಹೇಳಬೇಕಾದರೆ ಚಿನ್ನದ ಚಮಚ ಬಾಯಲ್ಲಿಟ್ಟುಕೊಂಡು ಹುಟ್ಟಿದ್ದಾನೆ ಎಂದು ಹೇಳುತ್ತೇವೆ.

ಅಸಲಿಗೆ ಈ ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ, ಸೀಸ ಕಬ್ಬಿಣ ಮುಂತಾದ ಲೋಹಗಳ ಪಾತ್ರೆಗಳಿಂದ ತಯಾರಿಸಿದ ಆಹಾರವನ್ನು ಯಾರು ಯಾವಾಗ ಮತ್ತು ಹೇಗೆ ಸೇವಿಸಲು ಪ್ರಾರಂಭಿಸಿದರು, ಯಾವ ಯಾವ ಪಾತ್ರೆಗಳನ್ನು ಬಳಸುವ ಮೂಲಕ ಆರೋಗ್ಯವನ್ನು ಕಾಯ್ದುಕೊಳ್ಳಬಹುದು ಯಾವುದನ್ನು ಬಳಸುವುದರಿಂದ ಹಾನಿಯಾಗುತ್ತದೆ ಎಂಬುದರ ಕುರಿತು ತುಸು ಅರಿಯೋಣ.

ಪ್ರಾಚೀನ ಶಿಲಾಯುಗದ ಕಾಲದಲ್ಲಿ ಮನುಷ್ಯನಿಗೆ ಬೆಂಕಿಯ ಪರಿಚಯವೇ ಇಲ್ಲದ ಸಮಯದಲ್ಲಿ ಆತ ಆಹಾರವನ್ನು ಹಸಿಯಾಗಿಯೇ ತಿನ್ನುತ್ತಿದ್ದ. ಮುಂದೆ ನಾಗರಿಕತೆ ಬೆಳೆದಂತೆ ಆತ ಮಣ್ಣಿನಿಂದ ತಯಾರಿಸಿದ ಪಾತ್ರೆಗಳನ್ನು ಬಳಸಲಾರಂಭಿಸಿದ....ಕ್ರಮ ಕ್ರಮೇಣ ತಾಮ್ರ, ಹಿತ್ತಾಳೆಯಂತಹ ಲೋಹದ ಪಾತ್ರೆಗಳು ನಂತರ ಉಳ್ಳವರ ಆಸಕ್ತಿಗನುಗುಣವಾಗಿ ಬೆಳ್ಳಿ ಬಂಗಾರದ ಪಾತ್ರೆಗಳು ಬಳಕೆಗೆ ಬಂದವು.

**ಚಿನ್ನ...** ಹಳದಿ ಲೋಹ ಎಂದೇ ಕರೆಯಲ್ಪಡುವ ಚಿನ್ನ ಒಂದು ಬಿಸಿಯಾದ ಲೋಹವಾಗಿದ್ದು ಚಿನ್ನದ ಪಾತ್ರೆಯಲ್ಲಿ ಆಹಾರ ತಯಾರಿಕೆ ಮತ್ತು ಆಹಾರ ಸೇವನೆಗಳು ದೇಹದ ಒಳಗಿನ ಮತ್ತು ಹೊರಗಿನ ಭಾಗಗಳನ್ನು ಅತ್ಯಂತ ಗಟ್ಟಿಗೊಳಿಸುತ್ತವೆ. ಮಲಗಿರುವಾಗಲು ಕಣ್ಣಿನ ದೃಷ್ಟಿಯನ್ನು ಹೆಚ್ಚಿಸುವಷ್ಟು ಶಕ್ತಿಯನ್ನು ನೀಡುತ್ತವೆ.

**ಬೆಳ್ಳಿ.....** ಬೆಳ್ಳಿಯು ತಂಪಾದ ಲೋಹವಾಗಿದ್ದು ಈ ಪಾತ್ರೆಗಳನ್ನು ಬಳಸುವವರ ದೇಹಕ್ಕೆ ತಣ್ಣನೆಯ ಅನುಭವವನ್ನು ನೀಡುತ್ತದೆ. ಬೆಳ್ಳಿಯ ಪಾತ್ರೆಗಳಲ್ಲಿ ಆಹಾರವನ್ನು ತಯಾರಿಸುವುದು ಮತ್ತು ಸೇವಿಸುವುದರಿಂದ ವ್ಯಕ್ತಿಯ ಬುದ್ಧಿಮತ್ತೆ ಚುರುಕಾಗುತ್ತದೆ, ಆರೋಗ್ಯ ಸುಧಾರಿಸುತ್ತದೆ ದೃಷ್ಟಿಯು ಇನ್ನಷ್ಟು ಪ್ರಖರವಾಗುತ್ತದೆ ಪಿತ್ತಕೋಶದ ಎಲ್ಲ ತೊಂದರೆಗಳನ್ನು ನಿವಾರಿಸುತ್ತದೆ. ಕೆಮ್ಮು ಮತ್ತು ವಾಯು ಬಾಧೆಗೆ ಬೆಳ್ಳಿ ಪಾತ್ರೆಯ ಆಹಾರ ಸೇವನೆ ಉತ್ತಮ ಮದ್ದಾಗಬಲ್ಲದು.

**ಕಂಚು...** ಕಂಚಿನಂತಹ ಧ್ವನಿ, ಕಂಚಿನ ಕಂಠ ಎಂದೆಲ್ಲಾ ಕೇಳಿದ್ದೇವಷ್ಟೇ. ಕಂಚಿನಷ್ಟು ತೀಕ್ಷ್ಣವಾದ ಜಾಣ್ಮೆ ಮತ್ತು ಶುದ್ಧವಾದ ರಕ್ತವನ್ನು ಹೊಂದಲು ಕಂಚಿನ ಪಾತ್ರೆಗಳನ್ನು ತಟ್ಟೆ ಲೋಟಗಳನ್ನು ಬಳಸಬೇಕು. ರಕ್ತದೊತ್ತಡವನ್ನು ಕಡಿಮೆ ಮಾಡುವ ಶಕ್ತಿ ಕಂಚಿಗಿದ್ದು ಉದರ ವಿಕಾರಗಳಿಗೆ ಒಳ್ಳೆಯ ಮದ್ದಾಗಬಲ್ಲದು. ಆದರೆ ಹುಳಿ ಪದಾರ್ಥಗಳನ್ನು ಕಂಚಿನ ಪಾತ್ರೆಯಲ್ಲಿ ಇಡಬಾರದು. ಈ ಲೋಹದೊಂದಿಗೆ ಹುಳಿ ಪದಾರ್ಥಗಳು ರಾಸಾಯನಿಕ ಕ್ರಿಯೆಗೆ ಒಳಪಟ್ಟು ಆಹಾರವನ್ನು ವಿಷಮಯವಾಗಿಸುತ್ತವೆ. ಆಹಾರದಲ್ಲಿನ ಕೇವಲ ಮೂರು ಶೇಕಡಾ ಜೀವಸತ್ವಗಳನ್ನು ಮಾತ್ರ ನಾಶ ಮಾಡುವ ಗುಣ ಕಂಚಿನ ಪಾತ್ರೆಗಿದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

**ತಾಮ್ರ....** ಕುಡಿಯುವ ನೀರನ್ನು ಬಹಳಷ್ಟು ಮನೆಗಳಲ್ಲಿ ತಾಮ್ರದ ಪಾತ್ರೆಗಳಲ್ಲಿ ಸಂಗ್ರಹಿಸಿಡಲಾಗುತ್ತದೆ. ರಕ್ತದ ಶುದ್ಧೀಕರಣಕ್ಕೆ, ಒಳ್ಳೆಯ ನೆನಪಿನ ಶಕ್ತಿಗೆ, ಪಿತ್ತಕೋಶಕ್ಕೆ ಸಂಬಂಧಪಟ್ಟ ಎಲ್ಲ ಕಾಯಿಲೆಗಳಿಂದ ದೂರವಿರಲು ತಾಮ್ರದ ಪಾತ್ರೆಯ ಬಳಕೆ ಅತ್ಯಂತ ಒಳ್ಳೆಯದು. ಕಾಯಿಲೆ ರಹಿತ ಜೀವನ ನಡೆಸಬೇಕೆಂದು ಇಚ್ಛಿಸುವ ವ್ಯಕ್ತಿ ತಾಮ್ರದ ತಂಬಿಗೆಯಲ್ಲಿ ತುಂಬಿಟ್ಟ ನೀರನ್ನು ಕುಡಿಯುವುದು ಬಲು ವಿಹಿತ. ತಾಮ್ರದ ಪಾತ್ರೆಯು ನೀರಿನಲ್ಲಿರುವ ಕಲ್ಮಶಗಳನ್ನು ನಿವಾರಿಸಿ ನೀರನ್ನು ಶುದ್ಧೀಕರಿಸುತ್ತದೆ. ಆದ್ದರಿಂದ ಕಡ್ಡಾಯವಾಗಿ ನೀರನ್ನು ತಾಮ್ರದ ಪಾತ್ರೆಯಲ್ಲಿ ಶೇಖರಿಸಿ ಇಡಬೇಕು ಆದರೆ ಹಾಲನ್ನು ಮಾತ್ರ ತಾಮ್ರದ ಪಾತ್ರೆಯಲ್ಲಿ ಶೇಖರಿಸಿಡುವುದಾಗಲಿ, ಬಳಸುವುದಾಗಲಿ ಮಾಡಬಾರದು. ತಾಮ್ರದ ಪಾತ್ರೆಯಲ್ಲಿನ ಹಾಲು ದೇಹದ ಆರೋಗ್ಯಕ್ಕೆ ಒಳ್ಳೆಯದಲ್ಲ.

**ಹಿತ್ತಾಳೆ...** ಆಹಾರವನ್ನು ಹಿತ್ತಾಳೆಯ ಪಾತ್ರೆಯಲ್ಲಿ ತಯಾರಿಸುವುದು ಮತ್ತು ಹಿತ್ತಾಳೆಯ ತಟ್ಟೆಗಳನ್ನು ಬಳಸುವುದು ಕೀಟ ಸಂಬಂಧಿ ಕಾಯಿಲೆಗಳಿಂದ ದೂರವಿಡುತ್ತದೆ. ಕಫ ಮತ್ತು ವಾತ ಸಂಬಂಧಿ ಕಾಯಿಲೆಗಳು ಕೂಡ ಇದರಿಂದ ದೂರವಾಗುತ್ತವೆ. ಹಿತ್ತಾಳೆಯ ಪಾತ್ರೆಗಳಲ್ಲಿ ಆಹಾರವನ್ನು ತಯಾರಿಸುವುದರಿಂದ ಜೀವಸತ್ವಗಳ ನಾಶ ಕೇವಲ ಏಳು ಶೇಕಡ ಮಾತ್ರ ಇರುತ್ತದೆ.

**ಕಬ್ಬಿಣ...** ದೇಹದ ಶಕ್ತಿ, ಸಾಮರ್ಥ್ಯಗಳನ್ನು ಹೆಚ್ಚಿಸಲು ಅವಶ್ಯಕತೆಗಳನ್ನು ಹೊಂದಲು ಕಬ್ಬಿಣದ ಪಾತ್ರೆಯಲ್ಲಿ ಆಹಾರವನ್ನು ತಯಾರಿಸುವುದು ಮತ್ತು ಬಳಸುವುದು ಅತ್ಯಂತ ಒಳ್ಳೆಯದು. ಕಬ್ಬಿಣ ಹಲವಾರು ಕಾಯಿಲೆಗಳನ್ನು ಗುಣಪಡಿಸುತ್ತದೆ. ಪಾಂಡು ರೋಗ ಎಂದು ಕರೆಯಲ್ಪಡುವ ತೊಂದರೆಯನ್ನು ಗುಣಪಡಿಸುವ ಶಕ್ತಿ ಕಬ್ಬಿಣಕ್ಕಿದೆ. ದೇಹದಲ್ಲಿ ಬಾವು ಮತ್ತು ಹಳದಿಗಟ್ಟುವಿಕೆಯನ್ನು ಕಬ್ಬಿಣದ ಬಳಕೆ ತಡೆಗಟ್ಟುತ್ತದೆ. ಕಾಮಾಲೆಯಂತಹ ಹಳದಿ ಕಾಮಣಿಯಂತಹ ಖಾಯಿಲೆಗಳನ್ನು ತಡೆಗಟ್ಟುತ್ತದೆ. ಕಬ್ಬಿಣದ ಹಂಚುಗಳ ಬಳಕೆ ನಮ್ಮಲ್ಲಿ ಅತಿ ಹೆಚ್ಚು. ನಮ್ಮ ತಾಯಂದಿರು ಕಬ್ಬಿಣದ ಪಾತ್ರೆಯಲ್ಲಿ ಮೆಹಂದಿ ಪುಡಿಯನ್ನು ಮತ್ತಿತರ ಕೆಲ ಸಾಮಗ್ರಿಗಳೊಂದಿಗೆ ರಾತ್ರಿ ಹೊತ್ತಿನಲ್ಲಿ ನೆನೆ ಇಟ್ಟು ಮುಂಜಾನೆ ತಲೆಗೆ ಹಚ್ಚುವ ಮೂಲಕ ತಮ್ಮ ತಲೆ ಕೂದಲಿಗೆ ಕಬ್ಬಿಣದ ಅಂಶವನ್ನು ಪಡೆದುಕೊಳ್ಳುತ್ತಾರೆ ಆದರೆ ಕಬ್ಬಿಣದ ತಟ್ಟೆಯಲ್ಲಿ ಊಟ ಮಾಡಬಾರದು. ಕಬ್ಬಿಣದ ತಟ್ಟೆಯಲ್ಲಿ ಊಟ ಮಾಡುವುದರಿಂದ ಮೆದುಳು ಹಾನಿಗೊಳಗಾಗುತ್ತದೆ ಮತ್ತು ಜಾಣ್ಮೆ ಕಡಿಮೆಯಾಗುತ್ತದೆ.

**ಸ್ಟೀಲ್...** ಪ್ರಸ್ತುತ ದಿನಮಾನಗಳಲ್ಲಿ ಅತ್ಯಂತ ಜನಪ್ರಿಯವಾಗಿರುವ ಸ್ಟೀಲ್ ಪಾತ್ರೆ, ಲೋಟ, ತಟ್ಟೆ ಮತ್ತು ಇತರ ದಿನೋಪಯೋಗಿ ವಸ್ತುಗಳು ಬಳಕೆ ಹಾನಿಕರವಲ್ಲ. ಬಿಸಿ, ತಂಪು ಮತ್ತು ರಾಸಾಯನಿಕ ಕ್ರಿಯೆಗಳಿಗೆ ಅವು ಪ್ರತಿಕ್ರಿಯಿಸುವುದಿಲ್ಲ. ಈ ಪಾತ್ರೆಗಳ ಬಳಕೆಯಿಂದ ಯಾವುದೇ ರೀತಿಯ ಲಾಭವಿಲ್ಲವಾದರೂ ಹಾನಿ ಕೂಡ ಇಲ್ಲ. ಸುಮಾರು ಮೂರು ನಾಲ್ಕು ದಶಕಗಳ ಹಿಂದೆ ಮನೆ ಮನೆಯಲ್ಲಿ ತಮ್ಮ ಹೊಳಪಿನಿಂದ ಕಾಲಿರಿಸಿದ ಈ ಸ್ಟೀಲ್ ಸಾಮಾನುಗಳು ಇಂದಿಗೂ ತಮ್ಮ ಜನಪ್ರಿಯತೆಯನ್ನು ಕಳೆದುಕೊಳ್ಳದೆ ಇಂದಿಗೂ ನೆಗ್ಗದೆ, ಕುಗ್ಗದೆ, ಹಿಗ್ಗದೆ ಕಾರ್ಯನಿರತವಾಗಿದೆ.

**ಅಲ್ಯೂಮಿನಿಯಂ ...** ಬಾಕ್ಸೈಟ್ ನಿಂದ ತಯಾರಾಗಿರುವ ಅಲ್ಯೂಮಿನಿಯಂ ಪಾತ್ರೆಗಳು ತಟ್ಟೆ ಲೋಟಗಳು ಬಳಸಲು ಯೋಗ್ಯವಲ್ಲ. ಈ ಹಿಂದಿನಿಂದಲೂ ಹಗುರವಾಗಿರುವ ಕಾರಣ ಮತ್ತು ಅತ್ಯಂತ ಕಡಿಮೆ ಬೆಲೆಯಲ್ಲಿ ದೊರೆಯುತ್ತವೆ ಎಂಬ ಕಾರಣಕ್ಕೆ ಇಂದಿಗೂ ಹಲವಾರು ಮನೆಗಳಲ್ಲಿ ತಮ್ಮ ಸ್ಥಾನವನ್ನು ಬಿಟ್ಟುಕೊಡದ ಅಲ್ಯೂಮಿನಿಯಂ ಪಾತ್ರೆಗಳ ಬಳಕೆ ಆರೋಗ್ಯಕ್ಕೆ ಒಳ್ಳೆಯದಲ್ಲ. ದೇಹಾರೋಗ್ಯವನ್ನು ಕಸಿಯುವ ಆಹಾರದಲ್ಲಿರುವ ಕಬ್ಬಿಣ ಮತ್ತು ಕ್ಯಾಲ್ಸಿಯಂ ಅಂಶವನ್ನು ಕರಗಿಸುವ ಶಕ್ತಿ ಅಲ್ಯೂಮಿನಿಯಂ ಪಾತ್ರೆಗಳಿಗಿದೆ. ಅಲುಮಿನಿಯಂ ಪಾತ್ರೆಗಳ ಬಳಕೆಯಿಂದ ಎಲುಬುಗಳು ಕ್ಷೀಣಿಸುವ, ಮಾನಸಿಕ ಅಸ್ವಸ್ಥತೆಗೊಳಗಾಗುವ ಪಿತ್ತಕೋಶ ಮತ್ತು ನರವ್ಯೂಹ ತೊಂದರೆಗೊಳಗಾಗುವ ಸಾಧ್ಯತೆ ಹೆಚ್ಚು. ಮೂತ್ರಕೋಶ ವೈಫಲ್ಯಕ್ಕೂ ಹಲವು ಬಾರಿ ಅಲ್ಯೂಮಿನಿಯಂ ಬಳಕೆ ಕಾರಣವಾಗುತ್ತದೆ. ಕ್ಷಯ ರೋಗ,ಅಸ್ತಮಾ, ಉಗ್ಗುವಿಕೆಯಂತಹ ಸಮಸ್ಯೆಗಳಿಗೆ ಅಲ್ಯುಮಿನಿಯಂ ಕಾರಣವಾಗುತ್ತದೆ.ಆಹಾರ ತಯಾರಿಸಲು ಅಲುಮಿನಿಯಂ ಪಾತ್ರೆಯನ್ನು ಬಳಸುವುದರಿಂದ ಆಹಾರದಲ್ಲಿನ ಶೇಕಡ 87 ರಷ್ಟು ಜೀವಸತ್ವಗಳು ನಾಶವಾಗುತ್ತವೆ ಎಂದರೆ ನಿಮಗೆ ಅಲುಮಿನಿಯಂ ಪಾತ್ರೆಯ ಬಳಕೆಯ ಅಡ್ಡ ಪರಿಣಾಮಗಳ ಗಂಭೀರತೆಯ ಅರಿವಾಗಬಹುದು.

**ಮಣ್ಣಿನ ಪಾತ್ರೆಗಳು...** ನಮ್ಮ ಹಿಂದಿನ ಹಿರಿಯರು ಮೂಢರಲ್ಲ ಎಂಬುದಕ್ಕೆ ಸಾಕ್ಷಿ ಮಣ್ಣಿನ ಪಾತ್ರೆಗಳು. ಮಣ್ಣಿಂದಲೇ ಹುಟ್ಟಿ ಮಣ್ಣಲ್ಲೇ ಮಣ್ಣಾಗುವ ಮಣ್ಣಿನ ಪಾತ್ರೆಗಳ ಬಳಕೆ ಅತ್ಯಂತ ಶ್ರೇಷ್ಠ. ಎಲ್ಲ ಕಾಯಿಲೆಗಳನ್ನು ದೂರವಿಡುವ ಮಣ್ಣಿನ ಪಾತ್ರೆಗಳು, ಗಡಿಗೆ, ಕುಡಿಕೆಗಳಲ್ಲಿ ಆಹಾರ ತಯಾರಿಸಿದರೆ ಅದರಲ್ಲಿನ ಜೀವಸತ್ವಗಳನ್ನು ಸಂಪೂರ್ಣವಾಗಿ ಹಾಗೆಯೇ ಉಳಿಸುತ್ತವೆ. ಹಲವಾರು ಕಾಯಿಲೆಗಳನ್ನು ಗುಣಪಡಿಸುವ ಶಕ್ತಿಯು ಮಣ್ಣಿನ ಪಾತ್ರೆಗಳಿಗಿದೆ ಎಂಬುದನ್ನು ಇಂದಿನ ಆಧುನಿಕ ವಿಜ್ಞಾನವು ಪುಷ್ಟೀಕರಿಸುತ್ತದೆ.

ಆಯುರ್ವೇದದ ಪ್ರಕಾರ ಪೋಷಕಾಂಶಗಳು ರುಚಿಕರವಾದ ಆಹಾರವನ್ನು ತಯಾರಿಸುವ ನಿಟ್ಟಿನಲ್ಲಿ ನಿಧಾನವಾಗಿ ಬೇಯುವ ಪ್ರಕ್ರಿಯೆಯನ್ನು ಹೊಂದಿರುವ ಮಣ್ಣಿನ ಪಾತ್ರೆಗಳು ಆರೋಗ್ಯದ ದೃಷ್ಟಿಯಿಂದ ಬಹಳ ಉತ್ತಮ ಆಯ್ಕೆ. ಸಂಪೂರ್ಣ ಆರೋಗ್ಯ ಲಾಭಗಳನ್ನು ಕೊಡುವ ಮಣ್ಣಿನ ಪಾತ್ರೆಗಳ ಬಳಕೆಯನ್ನು ಹಾಲು ಮತ್ತು ಹಾಲಿನ ಇತರ ಪದಾರ್ಥಗಳನ್ನು ಕಾಪಿಡಲು ಬಳಸುವುದು ಅತ್ಯುತ್ತಮ. ಮಣ್ಣಿನ ಪಾತ್ರೆಯಲ್ಲಿ ತಯಾರಿಸಲಾಗುವ ಆಹಾರ ನೂರು ಶೇಕಡ ಜೀವ ಸತ್ವಗಳನ್ನು ಆಹಾರದಲ್ಲಿ ಉಳಿಸಿ ಆಹಾರಕ್ಕೆ ವಿಶಿಷ್ಟ ರುಚಿ ಮತ್ತು ಸ್ವಾದವನ್ನು ನೀಡುತ್ತದೆ.

ಭಾರತದ ಶ್ರೀಸಾಮಾನ್ಯನಿಗೆ ಚಿನ್ನ ಮತ್ತು ಬೆಳ್ಳಿಯ ಆಭರಣಗಳೇ ಗಗನಕುಸುಮವಾಗಿದ್ದು ಇನ್ನು ಚಿನ್ನ ಬೆಳ್ಳಿಯ ಪಾತ್ರೆಗಳಲ್ಲಿ ಆಹಾರ ಸೇವಿಸುವುದು ಕನಸಿನ ಮಾತು. ಆದ್ದರಿಂದ ಈ ಯೋಚನೆಯನ್ನು ಕೈಬಿಡೋಣ.

ಕಂಚು ತಾಮ್ರ ಮತ್ತು ಹಿತ್ತಾಳೆಯ ಪಾತ್ರೆಗಳು ಈ ಹಿಂದೆ ನಮ್ಮ ಹಿರಿಯರು ಬಳಸುತ್ತಿದ್ದು ಇದೀಗ ಅವುಗಳ ಭಾರದ ಕಾರಣ ಮತ್ತು ನಿರ್ವಹಣೆಯ ದೃಷ್ಟಿಯಿಂದ ಕೈ ಬಿಡಲಾಗಿದೆ. ಈ ಪಾತ್ರೆಗಳು ಸದಾ ಫಳ ಫಳ ಹೊಳೆಯುತ್ತಿರಬೇಕು ಎಂಬ ದೃಷ್ಟಿಯಿಂದ ಪ್ರತಿದಿನವೂ ನೀರನ್ನು ಶೇಖರಿಸುವ ಪಾತ್ರೆಗಳನ್ನು ಲೋಟಗಳನ್ನು ತೊಳೆದು ತನ್ಮೂಲಕ ಹೆಚ್ಚಿನ ಹಾನಿಗಳನ್ನು ನಮ್ಮ ತಾಯಂದಿರು ಮಾಡಿಕೊಳ್ಳುತ್ತಿದ್ದಾರೆ. ಈ ಹಿಂದೆ ನಮ್ಮ ಹಿರಿಯರು ವಾರಕ್ಕೊಮ್ಮೆ ತಾಮ್ರದ ಹಂಡೆ ತಪ್ಪೇಲಿಗಳನ್ನು ಸುಮ್ಮನೆ ಕೈಯಾಡಿಸಿ ತೊಳೆದರೆ ಅಮಾವಾಸ್ಯೆ ಮತ್ತು ಹುಣ್ಣಿಮೆಗೆ ಮಾತ್ರ ಹುಣಸೆ ಹಣ್ಣು ಮತ್ತು ಉಪ್ಪನ್ನು ಹಚ್ಚಿ ತಿಕ್ಕಿ ತೊಳೆಯುತ್ತಿದ್ದರು. ಆದರೆ ಎಲ್ಲವೂ ಫಳ ಫಳಿಸಬೇಕು ಎಂಬ ಭ್ರಮೆಯಲ್ಲಿ ಮಹಿಳೆಯರು ಪ್ರತಿದಿನವೂ ತೊಳೆದು ನಮಗೆ ಅವಶ್ಯಕತೆ ಇರುವ ಎರಡು ಶೇಕಡ ಅಂಶಕ್ಕಿಂತ ಹೆಚ್ಚು ಸರಿಸುಮಾರು ಶೇಕಡ 40ರಷ್ಟು ಈ ಲೋಹಗಳು ನಮ್ಮ ಹೊಟ್ಟೆಯನ್ನು ಸೇರುವ ಮೂಲಕ ಇನ್ನಿಲ್ಲದ ಅವಾಂತರವನ್ನು ಸೃಷ್ಟಿಸಲು ಕಾರಣರಾಗಿದ್ದಾರೆ.

ಇದು ಸಲ್ಲದು. ತಾಮ್ರ ಹಿತ್ತಾಳೆ ಮತ್ತು ಕಂಚಿನ ಪಾತ್ರೆಗಳನ್ನು ಬಳಸುವ ಆಸಕ್ತಿ ಮತ್ತು ಆಸೆ ನಿಮಗಿದ್ದರೆ, ಅವುಗಳನ್ನು ತಿಕ್ಕುವ ತೊಳೆಯುವ ಮತ್ತು ನಿರ್ವಹಿಸುವ ದೃಷ್ಟಿಯಲ್ಲಿ ನಮ್ಮ ಪುರಾತನರ ಹಾದಿಯನ್ನು ಅನುಸರಿಸಬೇಕು. ಸ್ಟೀಲ್ ಪಾತ್ರೆಯ ಬಳಕೆ ಅಷ್ಟೇನೂ ಅಪೇಕ್ಷಣೀಯವಲ್ಲವಾದರೂ ನಿರ್ವಹಣೆಯ ದೃಷ್ಟಿಯಿಂದ ಅವುಗಳನ್ನು ಬಳಸುತ್ತಿದ್ದರೆ ಸರಿ ಆದರೆ ಮನೆಗಳ ಮುಂದೆ ಮಾರಾಟಕ್ಕೆ ಬರುವ( ಅವರದೇನು ತಪ್ಪಿಲ್ಲ ಬಿಡಿ! ಅದವರ ಹೊಟ್ಟೆಪಾಡು) ಹಳೆಯ ಪಾತ್ರೆಗಳನ್ನು ಬಟ್ಟೆಗಳನ್ನು ಕೊಟ್ಟು ಚೌಕಾಸಿ ಮಾಡಿ ಮೇಲೊಂದಷ್ಟು ದುಡ್ಡು ಕೊಟ್ಟು ಕೊಂಡುಕೊಂಡು ಸಂತಸಪಡುವ ಹೆಣ್ಣು ಮಕ್ಕಳಿಗೆ ಕಿವಿಮಾತು..... "ಹತ್ತು ಹೆರುವಲ್ಲಿ ಒಂದು ಮುತ್ತು ಹೆತ್ತೆ" ಎಂಬಂತೆ ಅಗ್ಗದ ಹತ್ತು ಪಾತ್ರೆಗಳನ್ನು ಖರೀದಿಸುವ ಬದಲು ಒಂದೊಳ್ಳೆಯ ಸ್ಟೀಲ್ ಪಾತ್ರೆಯನ್ನು ಖರೀದಿಸಿ. 'ಬಳಸಿಕೊಂಡೆವದನೆ ನಾವು ಅದಕು ಇದಕು ಎದಕು' ಎಂದು ಹೆಮ್ಮೆಯಿಂದ ಹೇಳೋಣ.

ಅಷ್ಟೇನೂ ಆಕರ್ಷಣೀಯವಲ್ಲ ಎಂದು ತೋರಿದರೂ ಆಹಾರದ ಸ್ವಾದವನ್ನು ಉಳಿಸುವ, ಬೆಳೆಸುವ ಮಣ್ಣಿನ ಪಾತ್ರೆಗಳನ್ನು ಬಳಸುವ ಮೂಲಕ ನಮ್ಮ ಹಿರಿಯರ ಸಂಸ್ಕೃತಿಯನ್ನು ಎತ್ತಿ ಹಿಡಿಯೋಣ.

# ಸರ್ಕಾರಿ ಆಸ್ಪತ್ರೆಗಳು ಖಾಸಗಿ ಆಸ್ಪತ್ರೆಗಳಿಗಿಂತ ಕಡಿಮೇನಿಲ್ಲ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ | ಕಾಯಕಲ್ಪ ಪ್ರಶಸ್ತಿಗೆ ಅಪಾರವಾದ ಸೇವೆ ಪ್ರಮುಖ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಸರ್ಕಾರಿ ಆಸ್ಪತ್ರೆಗಳೆಂದರೆ ಮೂಗುಮುರಿಯುವುದು ಬೇಡ ಖಾಸಗಿ ಆಸ್ಪತ್ರೆಗಳಿಗಿಂತ ಕಡಿಮೆ ಇಲ್ಲ ಎಂದು ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ಪಟ್ಟಣದ ಗುರುಭವನದಲ್ಲಿ ಜಿಲ್ಲಾ ಮತ್ತು ತಾಲೂಕು ಆಡಳಿತದಿಂದ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಶನಿವಾರ ಹಮ್ಮಿಕೊಂಡಿದ್ದ ಪ್ರಾಥಮಿಕ, ಸಮುದಾಯ ಹಾಗು ಆಯುಷ್ಮಾನ್ ಆರೋಗ್ಯ ಇಲಾಖೆಗಳು ಒಟ್ಟು 25 ಕಾಯಕಲ್ಪ ಪ್ರಶಸ್ತಿಗಳಿಗೆ ಆಯ್ಕೆಯಾಗಿ ತಾಲೂಕು ಮಟ್ಟದ ಕಾಯಕಲ್ಪೋತ್ಸವ ಪ್ರಶಸ್ತಿ ಪ್ರಧಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಇಂದು ಸರ್ಕಾರಿ ಆಸ್ಪತ್ರೆಗಲ್ಲಿ ಶೇ.32ರಷ್ಟು ಗರ್ಭಿಣಿಯರ ಶಸ್ತ್ರ ಚಿಕಿತ್ಸೆಗಳು ನಡೆಯುತ್ತಿವೆ. ಅದೇ ಖಾಸಗಿ ಆಸ್ಪತ್ರೆಗಳಲ್ಲಿ ಶೇ.72ರಷ್ಟು ಶಸ್ತ್ರ ಚಿಕಿತ್ಸೆಗಳು ಆಗುತ್ತಾವೆ. ಇದರಿಂದ ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಉತ್ತಮ ಚಿಕಿತ್ಸೆ, ತಾಳ್ಮೆ, ವೈದ್ಯರಲ್ಲಿ ನಂಬಿಕೆಗಳು ಅಪಾರವಾಗಿರುವ ಹಿನ್ನೆಲೆಯಲ್ಲಿ ಸರ್ಕಾರಿ ಆಸ್ಪತ್ರೆಗಳತ್ತ ರೋಗಿಗಳು ಮುಖಮಾಡುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಆಗುವುದರಿಂದ ಮನೆಯವರ ಮೇಲೆ ಸಾಲದ ಹೊರೆ ಕಡಿಮೆಯಾಗುತ್ತಿದೆ. ಆಶಾ ಕಾರ್ಯಕರ್ತರನ್ನು ನೆನೆಯುತ್ತಾ ಅವರ ಸೇವೆ ಅನನ್ಯ ಎಂದು ಶ್ಲಾಘಿಸಿದರು.



ಪುರಸಭೆಯ ಅಧ್ಯಕ್ಷ ಮರಿರಾಮಣ್ಣ ಮಾತನಾಡಿ, ಸರ್ಕಾರಿ ಆಸ್ಪತ್ರೆಗಳ ಸ್ವಚ್ಛತೆ, ಶುಚಿತ್ವ, ವೈದ್ಯಾಧಿಕಾರಿಗಳಲ್ಲಿ ನಂಬಿಕೆಗಳೇ ರೋಗಿಗಳಿಗೆ ಬಲ, ಪ್ರಶಸ್ತಿಗಳು ಮತ್ತಷ್ಟು ಜವಬ್ಧಾರಿಗಳನ್ನು ಹೆಚ್ಚಿಸುತ್ತೆ ಎಂದರು.

ಗುಣಮಟ್ಟ ಖಾತ್ರಿ ಸಲಹೆಗಾರರಾದ ಡಾ. ಎಂ.ಶಿವರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ವೇಳೆ ಜಿಲ್ಲಾಧಿಕಾರಿಗಳು ಪ್ರಶಸ್ತಿಗಳನ್ನು ನೀಡಿ, ಎಲ್ಲರಿಗೂ ಸನ್ಮಾನಿಸಿದರು. ತಹಸೀಲ್ದಾರ್ ಆರ್.ಕವಿತಾ, ಜಿಲ್ಲಾಆರೋಗ್ಯಾಧಿಕಾರಿಡಾ.ಎಲ್.ಆರ್.ಶಂಕರನಾಯ್ಕ್, ತಾಪಂ ಖಾತ್ರಿ ಯೋಜನಾಧಿಕಾರಿ ರಮೇಶ್ ಮಹಾಲಿಂಗಪುರ, ಆರ್.ಸಿ.ಎಸ್.ಅಧಿಕಾರಿ ಡಾ.ಬಿ.ಜಂಬಯ್ಯ, ಗುಣಮಟ್ಟ ಖಾತ್ರಿ ಜಿಲ್ಲಾಧಿಕಾರಿ ಡಾ.ಎಂ.ವಿನಯ್, ಡಾ.ಡಿ.ಆರ್.ಗುರುಪ್ರಸಾದ್, ಡಾ.ಗಂಗಾ, ಶ್ರೀನಿವಾಸ್‌ರೆಡ್ಡಿ, ರಾಜೇಶ್, ಶಿವಲಿಂಗಪ್ಪ, ಬಸವರಾಜ್, ಅಶೋಕನಾಯ್ಕ್ ಆಸ್ಪತ್ರೆಯ ವೈದ್ಯಾಧಿಕಾರಿಗಳು ಆಡಳಿತ, ಸಿಬ್ಬಂದಿ ವರ್ಗ ಮತ್ತಿತರರು ಇದ್ದರು.

ಆರೋಗ್ಯಾಧಿಕಾರಿ ಡಾ.ಎಚ್.ಎಂ.ಪ್ರವಿಣ್‌ಕುಮಾರ್, ಮುಖ್ಯ ವೈದ್ಯಾಧಿಕಾರಿ ಟಿ.ಎಚ್.ಅಚ್ಚುತರಾಯ, ಆರೋಗ್ಯ ನಿರೀಕ್ಷಣ ಅಧಿಕಾರಿ ಬಿ.ಬಿ.ರಾಹತ್ ನಿರ್ವಹಿಸಿದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

EVENT Media Coverage
Call us
94486 33038

## ನಿತ್ಯ ಪಂಚಾಂಗ

ಮಾಸ: ಆಶ್ವೀಜ । ಸಂವತ್ಸರ: ಕ್ರೋಧಿ

29–10–2024 – ಮಂಗಳವಾರ

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉತ್ತರ/ಫಾಲ್ಗುಣ |
| ಯೋಗ | : ಇಂದ್ರ |
| ಕರಣ | : ತೈತುಲ |
| ಸೂರ್ಯೋದಯ | : 06:31:42 |
| ಸೂರ್ಯಾಸ್ತ | : 17:49:09 |
| ರಾಹು ಕಾಲ | : 14:59–16:24 |
| ಯಮಘಂಡ ಕಾಲ | : 09:21–10:46 |
| ಗುಳಿಕ ಕಾಲ | : 12:10–13:35 |

## ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 28–10–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632 ಅಡಿ |
| ಒಳ ಹರಿವು | 15792 ಕ್ಯುಸೆಕ್ |
| ಹೊರ ಹರಿವು | 15432 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.773 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1608.83 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8906 ಕ್ಯುಸೆಕ್ |
| ಸಾಮರ್ಥ್ಯ | 35.326 ಟಿಎಂಸಿ |

# ಶವಸಾಗಿಸಲು ಹೆಣಗಾಟ

## ಸ್ಮಶಾನ, ಸೇತುವೆ ನಿರ್ಮಾಣಕ್ಕೆ ನಾಗಲಾಪುರ ಗ್ರಾಮಸ್ಥರ ಆಗ್ರಹ
## ಅಂತ್ಯ ಸಂಸ್ಕಾರಕ್ಕೂ ಅಡ್ಡಿ । ನೀರಲ್ಲೇ ಶವ ಹೊತ್ತೊಯ್ದ ಯುವಕರು

■ ಜಿ.ವಿ.ಸುಬ್ಬರಾವ್
ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ

ಮಳೆಗಾಲದಲ್ಲಿ ಗ್ರಾಮದ ಜನ ಮೃತಪಟ್ಟರೆ ಈ ಭಾಗದಲ್ಲಿ ಶವಸಂಸ್ಕಾರದ್ದೆ ಚಿಂತೆ. ಸಾವಿನ ಶೋಕಕ್ಕಿಂತಲೂ ಸ್ಮಶಾನಕ್ಕೆ ಹೆಣಸಾಗಿಸುವ ನೋವೇ ಹೆಚ್ಚಾಗಿ ಬಾಧಿಸುತ್ತಿರುವ ಈ ಭಾಗದ ಜನರ ಸಂಕಷ್ಟಕ್ಕೆ ಜನಪ್ರತಿನಿಧಿಗಳು, ಅಧಿಕಾರಿಗಳು ಕೇವಲ ಭರವಸೆಗಳನ್ನು ನೀಡಿದ್ದಾರೆಯೇ ಹೊರತು ಇನ್ನೂ ಕಾಮಗಾರಿಗಳು ಕಾರ್ಯಗತಗೊಂಡಿಲ್ಲ ಎನ್ನುವುದಕ್ಕೆ ಸೋಮವಾರ ಗ್ರಾಮವ ವ್ಯಕ್ತಿಯ ಶವ ಸಂಸ್ಕಾರ ಸಾಗಿಸುವ ದೃಶ್ಯಗಳೇ ಸಾಕ್ಷಿ.

ಹೊಸಪೇಟೆ ತಾಲೂಕಿನ ನಾಗಲಾಪುರ ಗ್ರಾಮದ ಜನರ ಗೋಳು ಕೇಳುವವರಿಲ್ಲವೆ ಎಂದು ಸ್ಮಶಾನದಲ್ಲಿ ಶವಸಂಸ್ಕಾರಕ್ಕೆ ಬಂದಿದ್ದ ಜನರು ಕಣ್ಣೀರು ಸುರಿಸಿದರು. ಮಳೆಗಾಲದಲ್ಲಿ ಸ್ಮಶಾನ ಮಾರ್ಗದಲ್ಲಿ ನೀರು ತುಂಬಿ ಹರಿಯುತ್ತದೆ. ಗುಂಡಾ ಗ್ರಾಮಕ್ಕೂ ಸಂಪರ್ಕ ಕಡಿತೊಳ್ಳುತ್ತದೆ. ನಿತ್ಯ ಕೃಷಿ ಚಟುವಟಿಕೆಗಳಿಗೆ ಈ ಮಾರ್ಗಗಳನ್ನೆ ರೈತರು ಅವಲಂಬಿಸಬೇಕಿದ್ದು, ಮಕ್ಕಳು, ಮಹಿಳೆಯರು ನೀರು ದಾಟಲು ಟ್ರ್ಯಾಕ್ಟರ್ ಮತ್ತಿತರ ವಾಹನಗಳನ್ನೇ ಕಾಯುವಂತಾಗಿದೆ. ವಾಹನಗಳು ಆಯತಪ್ಪಿದರೆ ಜನರ ಜೀವಕ್ಕೂ ಕುತ್ತು ಎದುರಾಗಲಿದೆ. ಸಂಬಂಧಿಸಿದ ಅಧಿಕಾರಿಗಳು, ಜನಪ್ರತಿನಿಧಿಗಳು ಭೇಟಿ ನೀಡಿ ಗ್ರಾಮದ ಜನರ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.



> ಮಹಿಳೆಯರು, ಮಕ್ಕಳು ಹಳ್ಳದಾಟಲು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಬಗೆಹರಿಸಲು ಅಧಿಕಾರಿಗಳು, ಜನಪ್ರತಿನಿಧಿಗಳು ಸ್ಪಂದಿಸುತ್ತಿಲ್ಲ ಗ್ರಾಮಸ್ಥರ ಕರ್ಮ ಯಾರೂ ತಲೆ ಕೆಡಿಸಿಕೊಳ್ಳುತ್ತಿಲ್ಲ. ಮಳೆಗಾಲದಲ್ಲಿ ನಮ್ಮೂರಲ್ಲಿ ಯಾರಾದರೂ ಸತ್ತರೆ ಸ್ಮಶಾನಕ್ಕೆ ಹೋಗಲು ಮೈ ನಡುಕ ಬರುತ್ತದೆ. ಮೊಣಕಾಲುದ್ದ ನೀರು ಕಾಲು ಜಾರುವ ಭಯದಲ್ಲಿ ಹೆಣ ಹೊತ್ತುಸಾಗಬೇಕು."ಈಹಳ್ಳಕ್ಕೆ ಸೇತುವೆ ನಿರ್ಮಿಸಿದರೆ ಅನುಕೂಲವಾಗುತ್ತದೆ.
> **– ಸತೀಶ್, ಎರಿಸ್ವಾಮಿ, ಅಂಜಿನಿ. ಗ್ರಾಮಸ್ಥರು.**

ಗ್ರಾಮದಲ್ಲಿ ಈಗಾಗಲೇ ಸ್ಮಶಾನವಿದ್ದರೂ ಅದು ಒಂದು ಸಮಯದಾಯಕ್ಕಿದೆ, ಸಾರ್ವಜನಿಕರಿಗೆ ಪ್ರತ್ಯೇಕ ರುದ್ರಭೂಮಿ ಇಲ. ಹಳ್ಳದ ಆಚೆ ಸರ್ಕಾರದ ತುಂಡು ಭೂಮಿಯನ್ನೇ ಅವಲಂಬಿಸಿರುವ ಗ್ರಾಮಸ್ಥರು ಸುಮಾರು ಒಂದು ಕಿ.ಮೀ. ದೂರದವರೆಗೆ ಶವ ಹೂಳಲು ಮಳೆಗಾಲದ ವೇಳೆ ಸುಮಾರು2–3 ಅಡಿ ಆಳದ ಹಳ್ಳದ ನೀರಿನಲ್ಲಿ ಶವ ಹೋರುವುದು ಗ್ರಾಮಸ್ಥರ ಕರ್ಮ ಎನ್ನುತ್ತಾರೆ.

ಜಮೀನು, ಸ್ಮಶಾನದ ರಸ್ತೆಯ ಹಳ್ಳಕ್ಕೆ ಸೇತುವೆ ನಿರ್ಮಿಸಲು ಅನೇಕ ಬಾರಿ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳಿಗೆ ಮನವಿ ಮಾಡಿದರು ನಿಷ್ಪ್ರಯೋಜನವಾಗಿದೆ. ಹಳ್ಳದ ಮೂಲಕ ಜಮೀನುಗಳಿಗೆ, ಬೇರೆ ಕೆಲಸ–ಕಾರ್ಯಗಳಿಗೆ ತೆರಳಿದವರು, ವಾಪಾಸು ಬರಲು ಟ್ರಾಕ್ಟರ್, ಎತ್ತಿನಬಂಡಿಗಳನ್ನು ಅವಲಂಬಿಸಿದ್ದಾರೆ.

# ದನಗಳನ್ನು ರಸ್ತೆಗೆ ಬಿಡಬೇಡಿ: ಸಿಎರೆಸಿ

## ನಿರ್ಲಕ್ಷಿಸಿದರೆ ಬಿಡಾಡಿ ದನಗಳು ಗೋಶಾಲೆಗೆ

■ ಹಂಪಿ ಟೈಮ್ಸ್ ಹೊಸಪೇಟೆ

ನಗರದಲ್ಲಿ ಬಿಡಾಡಿ ದನಗಳ ಆವಳಿ ಹೆಚ್ಚಾಗಿದ್ದು, ಬಿಡಾಡಿ ದನಗಳ ಮಾಲೀಕರಿದ್ದಲ್ಲಿ ದನಗಳನ್ನು ತಮ್ಮ ನಿವಾಸದ ಕೊಟ್ಟಿಗೆಯಲ್ಲೆ ಕಟ್ಟಿ ಕೊಳ್ಳಲು ನಗರಸಭೆ ಪೌರಾಯುಕ್ತ ಚಂದ್ರಪ್ಪ ತಿಳಿಸಿದ್ದಾರೆ.



ಬಿಡಾಡಿ ದನಗಳು ನಗರಸಭೆ ವ್ಯಾಪ್ತಿಗೆ ಬರುವ ಸಂಡೂರ್ ರಸ್ತೆ, ವಾಲ್ಮೀಕಿ ಸರ್ಕಲ್, ಎಪಿಎಂಸಿ ಸರ್ಕಲ್, ಬಳ್ಳಾರಿ ರೋಡ್ ಸರ್ಕಲ್, ಚಿತ್ತವಾಡಗಿ, ದೀಪಾಯನ ಶಾಲೆ ಮುಂಭಾಗ, ಆಕಾಶವಾಣಿ ಹತ್ತಿರ, ಆಶೋಕ್ ಬುಕ್‌ಸ್ಟಾಲ್ ಹತ್ತಿರ ಹಾಗೂ ನಗರದ ಪ್ರಮುಖ ರಸ್ತೆಗಳಲ್ಲಿ ದನಗಳು ಅಡ್ಡಲಾಗಿ, ಗುಂಪು ಗುಂಪುಗಳಾಗಿ ಮಲಗುತ್ತಿರುವುದರಿಂದ ರಸ್ತೆಯಲ್ಲಿ ಓಡಾಡುವ ವಾಹನ ಸವಾರರಿಗೆ, ವಯೋವೃದ್ಧರಿಗೆ, ಚಿಕ್ಕಮಕ್ಕಳಿಗೆ ತೊಂದರೆ ಉಂಟುಮಾಡುತ್ತಿವೆ. ಹಾಗೂ ಇವುಗಳಿಂದ ಅಪಘಾತವಾಗಿ ಪ್ರಾಣಹಾನಿಯ ಸಂಭವ ಇರುವುದರಿಂದ ಬಿಡಾಡಿ ದನಗಳ ಮಾಲೀಕರು ನವೆಂಬರ್ 3 ರೊಳಗಾಗಿ ದನಗಳನ್ನು ರಸ್ತೆಯಲ್ಲಿ ಬಿಡದೆ ತಮ್ಮ ನಿವಾಸಲದಲ್ಲಿಯೇ ದನಗಳನ್ನು ಕಟ್ಟಿಕೊಳ್ಳಬೇಕು. ಇಲ್ಲವಾದಲ್ಲಿ ಕರ್ನಾಟಕ ಪುರಸಭೆ ಅಧಿನಿಯಮ 1964 ರನ್ವಯ ಕ್ರಮ ಗೈಗೊಂಡು ದನಗಳನ್ನು ಗೋಶಾಲೆಗೆ ರವಾನಿಸಲಾಗುವುದು, ನಂತರ ಯಾವುದೇ ಕಾರಣಕ್ಕೂ ದನಗಳನ್ನು ಹಿಂದಿರುಗಿಸಲಾಗುವುದಿಲ್ಲ ಎಂದು ತಿಳಿಸಿದ್ದಾರೆ.

# ಒಳಮೀಸಲಾತಿ ಜಾರಿಗೆ ಆಗ್ರಹ

ಮೊದಲ ಪುಟದಿಂದ

ಸಮಾಜವನ್ನು ಮತ್ತೆ ನಿರ್ಲಕ್ಷಿಸಿದರೆ ಮಾದಿಗ ಮತ್ತು ಛಲವಾದಿ ಸಮುದಾಯಗಳು ಒಗ್ಗೂಡಿ ಮುಂದಿನ ದಿನಗಳಲ್ಲಿ ಬುದ್ಧಿ ಕಲಿಸಲಿದ್ದೇವೆ ಎಂದರು.

ಗುಂಡಗತ್ತಿ ಕೊಟ್ರಪ್ಪ, ಅಂಬೇಡ್ಕರ್ ಸಂಘದ ಅಧ್ಯಕ್ಷ ನಿಚ್ಚವ್ವನಹಳ್ಳಿ ಬೀಮಪ್ಪ, ಕೆ.ಡಿ.ಮರಿಯಪ್ಪ ವಕೀಲರು, ತಾ.ಪಂ.ಮಾಜಿ ಸದಸ್ಯ ಹುಲಿಕಟ್ಟಿ ಚಂದ್ರಪ್ಪ, ತಾ.ಪಂ.ಮಾಜಿ ಸದಸ್ಯ ಓ.ರಾಮಪ್ಪ, ಮಾತನಾಡಿದರು.

ಪ್ರತಿಭಟನೆಯಲ್ಲಿ ಸಂಘಟನೆಗಳ ಮುಖಂಡರಾದ ಕೊಂಗನಹೊಸೂರು ಶಿವಣ್ಣ, ಅರಸೀಕೆರೆ ಮರಿಯಪ್ಪ, ಓ.ಮಹಾಂತೇಶ್, ಸಿ.ಪ್ರತಾಪ್, ಸವಣೂರು ಯಲ್ಲಪ್ಪ, ಕಬ್ಬಹಳ್ಳಿ ಮೈಲಾಪ್ಪ, ಕಬ್ಬಹಳ್ಳಿ ಪರಸಪ್ಪ, ಎ.ಕೆ.ಹುಚ್ಚಪ್ಪ, ಹಲವಾಗಲು ರಮೇಶ್, ಪ್ರಭಾಕರ್ ವಕೀಲರು, ಹೆಗ್ಗರಿ ರಂಗಪ್ಪ, ತೆಲಿಗಿ ಹನುಮಂತಪ್ಪ, ಶೃಂಗಾರತೋಟ ಲಿಂಗರಾಜ್, ಕೆ.ಡಿ.ಅಂಜಿನಪ್ಪ, ಹಲಗೇರಿ ನಾಗರಾಜ್, ಡಿ.ಎಸ್.ಎಸ್.ಅಧ್ಯಕ್ಷ ಸುಭಾಷ್, ಚಂದ್ರಪ್ಪ ವಕೀಲರು, ಸಿ.ಬಸವರಾಜ್, ಸೇರಿದಂತೆ ಸಮುದಾಯದ ಸಾವಿರಾರು ಜನ ಪಾಲ್ಗೊಂಡಿದ್ದರು.

# ಚುನಾವಣಾ ಅಕ್ರಮ ತಡೆಯಲು ಸಾರ್ವಜನಿಕರು ಸಿ–ವಿಜಿಲ್ ಆಪ್‌ನಲ್ಲಿ ದೂರು ಸಲ್ಲಿಸಿ

■ ಹಂಪಿ ಟೈಮ್ಸ್ ಬಳ್ಳಾರಿ

ನ್ಯಾಯಸಮ್ಮತ ಮತ್ತು ಪಾರದರ್ಶಕ ಚುನಾವಣೆಗಳನ್ನು ನಡೆಸಲು ಸಾರ್ವಜನಿಕರ ಸಹಭಾಗಿತ್ವವೂ ಅತ್ಯಮೂಲ್ಯವಾಗಿದೆ. ಮುಕ್ತ, ಪಾರದರ್ಶಕ ಚುನಾವಣೆ ನಡೆಸಲು ಮತ್ತು ಚುನಾವಣಾ ಅಕ್ರಮ ತಡೆಯಲು ಭಾರತದ ಚುನಾವಣಾ ಆಯೋಗವು ಸಿ–ವಿಜಿಲ್ (C-Vigil) ಮೊಬೈಲ್ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸಿದೆ.

ನಿಮ್ಮ ಸ್ಮಾರ್ಟ್‌ಫೋನ್‌ನಿಂದ ನೇರವಾಗಿ ಮಾದರಿ ನೀತಿ ಸಂಹಿತೆಯ ಯಾವುದೇ ಉಲ್ಲಂಘನೆಗಳನ್ನು ನೀವು ವರದಿ ಮಾಡಬಹುದಾಗಿದೆ. ಯಾವುದೇ ಆಮಿಷಗಳ ಅಥವಾ ಅಕ್ರಮ ಪ್ರಚಾರ ಹಾಗೂ ಸರ್ಕಾರಿ ಸಂಪನ್ಮೂಲಗಳ ದುರುಪ ಯೋಗ ಅಥವಾ ಯಾವುದೇ ರೀತಿಯ ಉಲ್ಲಂಘನೆ ಯಾಗಿರಬಹುದು. ನಿಮ್ಮ ವರದಿಯು ನಮ್ಮ ಚುನಾವಣೆಗಳ ಸಮಗ್ರತೆಯನ್ನು ಎತ್ತಿಹಿಡಿಯಲು ಸಹಾಯ ಮಾಡುತ್ತದೆ. ಮತಕ್ಕಾಗಿ ಮತದಾರರನ್ನು ಸೆಳೆಯಲು ಹಣ, ಮದ್ಯ, ಉಡುಗೋರೆಗಳನ್ನು ಹಂಚುವವರನ್ನು ಪೋಲಿಸರಿಗೆ ತಿಳಿಸುವುದು ಹೇಗೆ? ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗುವುದನ್ನು ಹೇಗೆ ತಡೆಗಟ್ಟಬೇಕು ಎಂಬ ಹಲವು ಪ್ರಶ್ನೆಗಳು ಇದ್ದಲ್ಲಿ ಸಾರ್ವಜನಿಕರು ಸಿ–ವಿಜಿಲ್ ಆಪ್ (ಸಿಟಿಜನ್–ವಿಜಿಲ್) ಮೂಲಕ ದೂರು ನೀಡಬಹುದು ಎಂದು ಡಿಸಿ ತಿಳಿಸಿದ್ದಾರೆ.

# ಜನನಿಬಿಡ ಪ್ರದೇಶದಲ್ಲಿ ಪಟಾಕಿ ಮಾರಾಟ ನಿಷೇಧ

## ಡಿಸಿ ಎಂ.ಎಸ್.ದಿವಾಕರ ಸೂಚನೆ । ಪಟಾಕಿ ಮಾರಾಟ ಪರವಾನಗಿ ಸಭೆ

■ ಹಂಪಿ ಟೈಮ್ಸ್ ಹೊಸಪೇಟೆ

ಸರ್ಕಾರದ ಆದೇಶದಂತೆ ಜನನಿಬೀಡ ಪ್ರದೇಶದಲ್ಲಿ ಪಟಾಕಿ ಮಾರಾಟ ನಿಷೇಧಿಸಲಾಗಿದ್ದು, ಅಧಿಕಾರಿಗಳು ಅಪಘಾತಗಳಾಗದಂತೆ ಎಚ್ಚರ ವಹಿಸಿಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ದೀಪಾವಳಿ ಹಬ್ಬದಲ್ಲಿ ಪಟಾಕಿ ಮಾರಾಟ ಮಾಡಲು ಪರವಾನಿಗೆ ನೀಡುವುದರ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ತಹಶೀಲ್ದಾರರು, ಅಗ್ನಿ ಶಾಮಕ ಅಧಿಕಾರಿ, ಸ್ಥಳೀಯ ಸಂಸ್ಥೆಯ ಮುಖ್ಯ ಅಧಿಕಾರಿಗಳು, ಜಿಲ್ಲಾ ಪರಿಸರ ಅಧಿಕಾರಿಗಳು, ಪೋಲೀಸ್ ಅಧಿಕಾರಿಗಳು ಹಾಗೂ ಇನ್ನಿತರನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸಿದ್ದು, ಅವರು ಪ್ರತಿ ತಾಲೂಕಿನಲ್ಲಿ ಯಾವುದೇ ರೀತಿಯಲ್ಲಿ ಹಾನಿಯಾಗದಂತೆ ಎಚ್ಚರ ವಹಿಸಬೇಕು. ಪಟಾಕಿ ಮಾರಾಟ ಮಾಡಲು ಪರವಾನಗಿ ನೀಡುವ ಮೊದಲು ಸಂಪೂರ್ಣವಾಗಿ ಪರೀಕ್ಷಿಸಿ ಪರವಾನಿಗೆಯನ್ನು ನೀಡಬೇಕು. ಕಡ್ಡಾಯ ವಾಗಿ ಹಸಿರು ಪಟಾಕಿಗಳಿಗೆ ಮಾತ್ರ ಅವಕಾಶ ನೀಡಬೇಕು ಎಂದು ಅಧಿಕಾರಿಗಳಿಗೆ ಅದೇಶ ನೀಡಿದರು.

ಸರ್ಕಾರದ ಅದೇಶದಂತೆ ಪ್ರತಿ ಮಳಿಗೆಗಳಿಗೆ ಜಿಎಸ್‌ಟಿ ಕಡ್ಡಾಯಗೊಳಿಸಿದ್ದು, ಪರವಾನಿಗೆ ನೀಡುವ ಮೊದಲು ಎಲ್ಲ ದಾಖಲೆಗಳನ್ನು ಸಂಪೂರ್ಣವಾಗಿ ಪರೀಕ್ಷಿಸಬೇಕು. ಜನನಿಬಿಡ ಮತ್ತು ವಾಣಿಜ್ಯ ಸಂಕೀರ್ಣಗಳ ಸ್ಥಳಗಳಲ್ಲಿ ಯಾವುದೇ ಖಾಯಂ ಅಂಗಡಿ ಅಥವಾ ಕಟ್ಟಡಗಳಲ್ಲಿ ಚಿಲ್ಲರೆ ಪಟಾಕಿ ಮಾರಾಟ ಮಳಿಗೆಗಳನ್ನು ತೆರೆಯಲು, ಪಟಾಕಿಗಳ ದಾಸ್ತಾನು ಹಾಗೂ ಮಾರಾಟಕ್ಕೆ ಅವಕಾಶವಿರುವುದಿಲ್ಲ, ಬೆಳಿಗ್ಗೆ 8 ರಿಂದ ರಾತ್ರಿ 10 ಗಂಟೆಯವರೆಗೆ ಮಾತ್ರ ಪಟಾಕಿ ಸಿಡಿಸಲು



ಅವಕಾಶ ವಿರುತ್ತದೆ, ಪಟಾಕಿಗಳನ್ನು ತೆರೆದ ಪ್ರದೇಶಗಳಲ್ಲಿ, ತಾತ್ಕಾಲಿಕ ಮಳಿಗೆಗಳಲ್ಲಿ ಮಾತ್ರ ದಾಸ್ತಾನು ಮಾಡಲು ಹಾಗೂ ಮಾರಾಟ ಮಾಡಲು ಅನುಮತಿ ಇರುತ್ತದೆ.

ಮಳಿಗೆಗಳಲ್ಲಿ ಎರಡು ಕಡೆ ಸರಾಗವಾಗಿ ಗಾಳಿಯಾಡುವಂತಿರಬೇಕು., ಮಳಿಗೆಗಳನ್ನು ನಿರ್ಮಿಸಲು ಉಪಯೋಗಿಸುವ ಸಾಮಗ್ರಿಗಳು ಸುಲಭವಾಗಿ ಹತ್ತಿಕೊಳ್ಳುವ ರೀತಿಯದ್ದಾಗಿರಬಾರದು ಹಾಗೂ ಸಾಧ್ಯವಾ ದಷ್ಟೂ ಬೆಂಕಿ ತಡೆಗಟ್ಟುವ ಸಾಮಗ್ರಿಗಳನ್ನು ನಿರ್ಮಾಣಕ್ಕೆ ಉಪಯೋಗಿ ಸಬೇಕು. ಪ್ರತಿಯೊಂದು ಮಳಿಗೆಗೆ ಮುಂದಿನಿಂದ ಹಾಗೂ ಹಿಂದಿನಿಂದ ಪ್ರವೇಶಿಸುವ ವ್ಯವಸ್ಥೆ ಇರಬೇಕು, ಇದರಿಂದ ಅಪಘಾತ ಸಂದರ್ಭದಲ್ಲಿ ಮಳಿಗೆಗಳನ್ನು ಪರಿಸ್ಥಿತಿಗನು ಗುಣವಾಗಿ ಪ್ರವೇಶಿಸಿ ಒಳಗಿದ್ದವರನ್ನು ರಕ್ಷಿಸಬಹುದು ಹಾಗೂ ಅವಶ್ಯಕತೆ ಬಿದ್ದರೆ ಮಳಿಗೆಗಳನ್ನು ಒಡೆದು ಒಳ ಪ್ರವೇಶಿಸಲು ಸುಲಭವಾಗುತ್ತದೆ ಎಂದು ಹೇಳಿದರು.

ಪ್ರತಿಯೊಂದು ಮಳಿಗೆಗಳು 100 ಚದರ ಅಡಿ ವಿಸ್ತೀರಣವಿರಬೇಕು ಮತ್ತು ಒಳಗೆ ಯಾವುದೇ ಹೆಚ್ಚಿನ ದಾಸ್ತಾನಿನ ವ್ಯವಸ್ಥೆ ಇರಬಾರದು, ಮಳಿಗಗಳಲ್ಲಿ 9 ಲೀಟರ್ ಸಾಮರ್ಥ್ಯದ ಒಂದು ವಾಟರ್ ಪ್ರೆಜರ್ ಮಾದರಿ ಆಗ್ನಿನಂದಕ ಹಾಗೂ ಎರಡು ಬಕೆಟ್‌ಗಳಲ್ಲಿ ನೀರನ್ನು ಮತ್ತು ಎರಡು ಬಕೆಟ್‌ನಲ್ಲಿ ಮಣ್ಣು ತುಂಬಿಟ್ಟಿರಬೇಕು. ಮಳಿಗೆ ಪಕ್ಕದಲ್ಲಿ ಎರಡು ಡ್ರಮ್‌ಗಳಲ್ಲಿ ಕನಿಷ್ಠ 400 ಲೀಟರ್ ನೀರನ್ನು ಶೇಖರಿಸಿಟ್ಟಿರಬೇಕು. ಮಳಿಗೆಯಲ್ಲಿ ಅಡುಗೆ ಅಥವಾ ಧೂಮಪಾನಕ್ಕೆ ಅವಕಾಶ ನೀಡಬಾರದು ಎಂದು ಸೂಚನಾ ಫಲಕವನ್ನು ಹಾಕಿರಬೇಕು, ಪಟಾಕಿಗಳನ್ನು ಹಗಲಿನ ವೇಳೆಯಲ್ಲಿ ಮಾತ್ರ ಮಾರಾಟ ಮಾಡಬೇಕು. ರಾತ್ರಿ ವೇಳೆ ಮಳಿಗೆಯಲ್ಲಿ ಯಾರೂ ಮಲಗಬಾರದು ಎಂದು ಸಭೆಯಲ್ಲಿ ಹಾಜರಿದ್ದ ಪಟಾಕಿ ಮಾರಾಟಗಾರರಿಗೆ ಹಾಗೂ ಸೂಕ್ತ ಮುನ್ನೆಚ್ಚರಿಕೆ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲಿಂ ಪಾಷ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶರಣಪ್ಪ ಮುದಗಲ್, ನಗರಸಭೆಯ ಪೌರಾಯುಕ್ತ ಚಂದ್ರಪ್ಪ, ಜಿಲ್ಲಾ ಅಗ್ನಿ ಶಾಮಕ ಅಧಿಕಾರಿ ಪ್ರಮೋದ್ ಸೇರಿದಂತೆ ಪರಿಸರ ಮಾಲಿನ್ಯ ಇಲಾಖೆ, ಕಂದಾಯ ಇಲಾಖೆ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು ತಹಶೀಲ್ದಾರರು ವಿಡಿಯೋ ಸಂವಾದದ ಮೂಲಕ ಹಾಜರಿದ್ದರು.

# ಅಳವಂಡಿ: ಅತಿಥಿ ಶಿಕ್ಷಕರ ನೇಮಕಕ್ಕೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ತಾಲ್ಲೂಕಿನ ಅಳವಂಡಿ ಗ್ರಾಮದ ಡಾ ಬಿ.ಆರ್.ಅಂಬೇಡ್ಕರ್ ಬಾಲಕಿಯರ ವಸತಿ ಶಾಲೆಯ ಪ್ರಸಕ್ತ ಸಾಲಿನಲ್ಲಿ ಅತಿಥಿ ಶಿಕ್ಷಕರ ನೇಮಕಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಡಾ ಬಿ.ಆರ್.ಅಂಬೇಡ್ಕರ್ ಬಾಲಕಿಯರ ವಸತಿ ಶಾಲೆ, ಅಳವಂಡಿ ತಾ.ಜಿ ಕೊಪ್ಪಳ, ಈ ಶಾಲೆಯ 2024–25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಖಾಲಿ ಇರುವ ಇಂಗ್ಲಿಷ ಭಾಷಾ ಶಿಕ್ಷಕರ (ಬಿ.ಎ.ಬಿಎಡ್ ಅಥವಾ ಎಂ.ಎ.ಬಿಎಡ್) ಹಾಗೂ ಕಂಪ್ಯೂಟರ್ ವಿಷಯದ (ಬಿಎಸ್‌ಸಿ/ಎಂಎಸ್‌ಸಿ ಕಂಪ್ಯೂಟರ್/ಬಿಸಿಎ/ಬಿಇ ಕಂಪ್ಯೂಟರ್ ಸಾಯಿನ್ಸ್) ಅತಿಥಿ ಶಿಕ್ಷಕರ ಹುದ್ದೆಗೆ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸಲು ಅತಿಥಿ ಶಿಕ್ಷಕರಿಂದ ಅರ್ಜಿ ಆಹ್ವಾನಿಸಲಾಗಿದ್ದು, ಮೆರಿಟ್ ಮತ್ತು ಪಾಠ ಪರೀವಿಕ್ಷಣೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು. ಮಹಿಳಾ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ಅರ್ಹ ಅಭ್ಯರ್ಥಿಗಳು ಡಾ.ಬಿ.ಆರ್.ಅಂಬೇಡ್ಕರ್ ಬಾಲಕಿಯರ ವಸತಿ ಶಾಲೆ ಅಳವಂಡಿಯಲ್ಲಿ ನವೆಂಬರ್ 10 ರೊಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ:7019187210 ಗೆ ಸಂಪರ್ಕಿಸಬಹುದಾಗಿದೆ ಎಂದು ಅಳವಂಡಿಯ ವಸತಿ ಶಾಲೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು
ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಕನ್ನಡ

### ಕನ್ನಡ (ಪ್ರ.ಭಾ) ಗದ್ಯ – ಯುದ್ಧ.

**ಲೇಖಕರ ಪರಿಚಯ–** ಶ್ರೀಮತಿ ಸಾರಾ ಅಬೂಬಕ್ಕರ್ ಅವರು ಜೂನ್ 30, 1936ರಲ್ಲಿ ಕಾಸರಗೋಡಿನಲ್ಲಿ ಜನಿಸಿದರು. ಈ ನಾಡಿನ ಖ್ಯಾತ ಕಥೆಗಾರ್ತಿ ಹಾಗೂ ಕಾದಂಬರಿಗಾರ್ತಿಯಾಗಿ ಜನಪ್ರಿಯತೆ ಗಳಿಸಿರುವ ಇವರು ಚಪ್ಪಲಿಗಳು, ಖೆಡ್ಡಾ, ಪಯಣ, ಅರ್ಧ ರಾತ್ರಿಯಲ್ಲಿ ಹುಟ್ಟಿದ ಕೂಸು ಕವನ ಸಂಕಲನ ಗಳನ್ನು ಹಾಗೂ ಚಂದ್ರಗಿರಿಯ ತೀರದಲ್ಲಿ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲ್ಲಿ ಮೊದಲಾದ ಕಾದಂಬರಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಕೃಷಿಗಾಗಿ ಅನೇಕ ಪ್ರಶಸ್ತಿಗಳು ಲಭಿಸಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ ಇವರಿಗೆ ಲಭಿಸಿದೆ. (ಮಾರ್ಚ್–2019)

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ರಾಹಿಲನು ಯಾರು? (ಜೂನ್ –2020)**

**ಉತ್ತರ–** ರಾಹಿಲನು ಸೈನ್ಯದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದ ಒಬ್ಬ ಡಾಕ್ಟರ್.

**2. ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು ?(ಮಾರ್ಚ್–2018)**

**ಉತ್ತರ–** ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ ಬೇಕಾದ ಔಷಧ ಮತ್ತು ಶಸ್ತ್ರಚಿಕಿತ್ಸೆ ಸಾಮಾನುಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು.

**3. ಗಡಿ ಪ್ರದೇಶಗಳಲ್ಲಿ 'ಬ್ಲಾಕ್‌ಔಟ್' ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?**

**ಉತ್ತರ–** ಶತ್ರುಗಳ ವೈಮಾನಿಕ ದಾಳಿಯಿಂದ ರಕ್ಷಿಸಿಕೊಳ್ಳಲು ಗಡಿ ಪ್ರದೇಶಗಳಲ್ಲಿ 'ಬ್ಲಾಕ್‌ಔಟ್' ನಿಯಮವನ್ನು ಪಾಲಿಸಲಾಗುತ್ತದೆ.

**4. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು ? (ಜೂನ್–2019)**

**ಉತ್ತರ–** ರಾಹಿಲನು ಮುದುಕಿ ಎದುರಿಗೆ" ನಾನು ಯುದ್ಧ ಮಾಡುವ ಮೂರ್ಖರ ಕಡೆಯವರಲ್ಲ ,ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು" ಎಂದು ಗಂಭೀರವಾಗಿ ನುಡಿದನು.

**5. ಯುದ್ಧದ ಬಗೆಗೆ ಮುದುಕಿಯ ಅಭಿಪ್ರಾಯವೇನು ?**

**ಉತ್ತರ–** "ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದು ಯುದ್ಧ" ಎಂಬುದು ಯುದ್ಧದ ಬಗೆಗೆ ಮುದುಕಿಯ ಅಭಿಪ್ರಾಯ.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು– ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಡಾಕ್ಟರ್‌ಗೆ ವಿಮಾನದ ಪೈಲೆಟ್ ಏನು ಹೇಳಿದನು ?**

**ಉತ್ತರ–** ಡಾಕ್ಟರ್ ಗೆ ವಿಮಾನದ ಪೈಲೆಟ್ " ಡಾಕ್ಟರ್, ರೇಡಿಯೋ ಸಮನಾಗಿ ಕಾರ್ಯನಿರ್ವಹಿಸುತ್ತಿಲ್ಲ, ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗುತ್ತಿಲ್ಲ, ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೆ ಈ ಕತ್ತಲೆಯಲ್ಲಿ ಏನೂ ಕಾಣುತ್ತಿಲ್ಲವಲ್ಲ ? ಎಂದು ಹೇಳಿದನು.

**2. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು ? (ಮಾರ್ಚ್–2018 , ಜೂನ್ –2019)**

**ಉತ್ತರ–** ಮಹಿಳೆಯ ಆರ್ತನಾದ ಕೇಳಿ" ಅಯ್ಯೋ ಆ ಮಹಿಳೆ ಯಾವ ಅಪಾಯದಲ್ಲಿ ಸಿಲುಕಿದ್ದಾಳೆ ,ಆ ಮನೆಯೊಳಗೆ ಏನು ಸಂಭವಿಸುತ್ತಿದೆ ತಾನು ಈಗ ಈ ಕದವನ್ನು ತಟ್ಟಿದರೆ ಪರಿಣಾಮ ಏನಾಗಬಹುದು ಆ ಮನೆಯೊಳಗೆ ಈ ಸಮಯದಲ್ಲಿ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ" ಎಂಬ ಪ್ರಶ್ನೆಗಳು ಮೂಡಿದವು.

**3. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು ?**

**ಉತ್ತರ–** ಮುದುಕಿಯು ರಾಹಿಲನ ಬಳಿ "ನೋಡಪ್ಪಾ ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ ನೆಮ್ಮದಿಯಿಂದಲೇ ಇದ್ದೆವು. ಆಸ್ತಿ ನಮಗೆ ಸಾಕಾಗುವಷ್ಟಿತ್ತು ಈಗಲೂ ಇದೆ ಎನ್ನು ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ ಯುದ್ಧವಂತೆ ಯುದ್ಧ! ಎಂದು ತಿರಸ್ಕಾರದಿಂದ ನೋಡಿದಳು.

**4. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು ?**

**ಉತ್ತರ–** ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ "ಇಷ್ಟು ವರ್ಷಗಳಿಂದಲೂ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲ ? ಈ ಯುದ್ಧವಿಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿ ಕೊಳ್ಳುತ್ತಿದ್ದೆನಲ್ಲ, ದೇವರೇ ? ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಡುತ್ತೀಯಾ ? "ಎಂದು ನುಡಿದಳು.

**5. ಮುದುಕಿಯು ಸೈನಿಕರಿಂದ ರಾಹಿಲನನ್ನು ಹೇಗೆ ರಕ್ಷಿಸಿದಳು ? (ಮಾರ್ಚ್–2020)**

**ಉತ್ತರ–** ಬಾಗಿಲು ತೆಗೆಯಿರಿ ಎಂಬ ಘರ್ಜನೆ ಕೇಳಿ ಮುದುಕಿಯು ನಿಶಬ್ದವಾಗಿ ರಾಹಿಲನನ್ನು ಸೊಸೆ ಮಲಗಿದ ಕೋಣೆಗೆ ಕಳಿಸಿ ಮಂಚ ದಡಿಯನ್ನು ತೋರಿಸಿದಳು. ಬಾಗಿಲು ತೆರೆದಾಗ ಒಳ ನುಗ್ಗಿದ ಸೈನಿಕರು "ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ ? ಎಂದು ಹುಡುಕಲು ಮುಂದಾದಾಗ' ನನ್ನ ಮೊಮ್ಮಗುವಿನ ಹೆಣವಿದೆ ಅದನ್ನು ನೋಡಿ ! ಈ ಯುದ್ಧ ನನ್ನ ಮೊಮ್ಮಗುವನ್ನು ಉಳಿಸಿಲ್ಲವಲ್ಲ ? ಯಾರಿಗಾಗಿ ಯಾತಕ್ಕಾಗಿ ಈ ಯುದ್ಧ ? ಅದನ್ನಾದರೂ ಹೇಳಿರಲ್ಲ? ಎನ್ನುತ್ತಾ ನಿರ್ಜೀವ ಶಿಶುವಿನ ಬಳಿ ಕುಳಿತು ಎದೆ ಬಡಿದುಕೊಂಡು ಅಳುತ್ತಾಳೆ ಬಂದವರು ಮಗುವಿನ ಶವವನ್ನು ನೋಡಿದರು. ಕೋಣೆಯಲ್ಲಿ ಹರಡಿದ್ದ ಹಸಿನೆತ್ತರಿನ ವಾಸನೆ ಅವರ ಮೂಗಿಗೆ ಬಡಿಯಿತು. ಬಂದವರು ನಿಶಬ್ದವಾಗಿ ಹೊರ ನಡೆದರು.ಹೀಗೆ ಮುದುಕಿಯು ಸೈನಿಕರಿಂದ ರಾಹಿಲನನ್ನು ರಕ್ಷಿಸಿದಳು.

ನಿನ್ನ ಏಳಿಗೆಗೆ ನೀನೆ ಶಿಲ್ಪಿ

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು.ಕೆ. ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ. ಕೂಡ್ಲಿಗಿ(ತಾ) ವಿಜಯನಗರ(ಜಿ)

ಸಾಯಿಮಣಿ ಪ್ರಕಾಶನ, ಹೊಸಪೇಟೆ